ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, the 5th February, 1970.

The House met in the Assembly Chamber, Vidhana Soudha, Bangalore, at Forty-three Minutes past Eight of the Clock.

MR. SPEAKER (SRI S. D. KOTHAVALE) in the Chair.

Sri M. NAGAPPA.—I want to know what has happened to my adjournment motion on Basavandurg Harijan Problem. The Hon'ble Minister is also here.

Mr. SPEAKER. – It will be taken up after completing the Business on the Agenda.

CITY OF BANGALORE IMPROVEMENT (AMENDMENT) BILL, 1970

(*i*) **Statutory Resolution to disapprove the ordinance (1969).**

(*ii*) **Motion to consider the Bill.**

Sri M. NAGAPPA (Raichur).—I beg to move :

"That this Assembly disapproves Ordinance No. 5 of 1969 namely, 'The City of Bangalore Improvement (Amendment) Ordinance, 1969' promulgated on 14th day of October 1969 by the Governor of Mysore,"

Mr. SPEAKER.—Motion moved :

"That this Assembly disapproves Ordinance No. 5 of 1969 namely, 'The City of Bangalore Improvement (Amendment) Ordinance, 1969' promulgated on 14th day of October 1969 by the Governor of Mysore."

Sri B. M. PATIL (Minister of State for Municipal Administration).—I beg to move :

"That the City of Bangalore Improvement (Amendment) Bill, 1970 be taken into consideration."

Mr. SPEAKER.—Motion moved :

"That the City of Bangalore Improvement (Amendment) Bill, 1970 be taken into consideration."

Both the Statutory Resolution and the Consideration motion are open for discussion.

†Sri B. M. PATIL.—Mr. Speaker Sir, the City of Bangalore Improvement (Amendment) Bill, 1970 is a simple Bill. At present there is no provision in the Improvement Trust Board Act to raise loans and float debentures. The Improvement Trust Board is constituted for the purpose of taking up many improvement schemes and executing many lay outs. Because of the paucity of funds, the Trust Board has not been able to take many of these schemes up to the expectation of the people and also it is not in a position to implement such schemes expeditiously. In the Institutions like Housing Board and Housing Corporation, there is a provision to enable those Institutions to raise loans. Therefore this amending Bill seeks to empower the Bangalore City Improvement Board to raise loans, to implement schemes and to take up some improvement schemes. Therefore I commend this simple amending Bill for the acceptance of the House.

†ಶ್ರೀ ಎಂ. ನಾಗಪ್ಪ.—ಅಧ್ಯಕ್ಷರೇ, ಈ ಮಸೂದೆ ಎರಡು ಮೂರು ಕ್ಲಾಜುಗಳಿಂದ ಕೂಡಿದ್ದರೂ ಸಹಿತ ಕ್ಲಾಜ್ 2 ಬಹಳ ಮುಖ್ಯವಾದುದು. ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಕ್ಟಿಗೆ 29(ಎ) ಸೆಕ್ಷನ್ ಸೇರಿಸಬೇಕು ಎನ್ನುವ ತಿದ್ದುಪಡಿಯನ್ನು ತಂದಿದ್ದಾರೆ. ಈ ಬೋರ್ಡಿಗೆ ಸಾಲ ತೆಗೆದುಕೊಳ್ಳತಕ್ಕ ಅಧಿಕಾರ ಕೊಡಬೇಕು, ಅದಕ್ಕೆ ಸರ್ಕಾರ ನಿಯಮಗಳನ್ನು ಮಾಡಿ, ಆ ನಿಯಮಗಳ ಪ್ರಕಾರ ಹಣ ತೆಗೆದುಕೊಳ್ಳತಕ್ಕ ಹಕ್ಕು ಇರಬೇಕು ಎನ್ನುವ ತಿದ್ದುಪಡಿಯನ್ನು ತಂದಿದ್ದಾರೆ. ಇಂಥ ಒಂದು ಅಧಿಕಾರವನ್ನು ನಾವು ಬೋರ್ಡಿಗೆ ಕೊಡಬೇಕಾದ ಪರಿಸ್ಥಿತಿಯಲ್ಲಿ ಕೆಲವು ವಿಷಯಗಳನ್ನು ಗಮನಿಸಬೇಕು. ಈಗಾಗಲೇ ಕೇಂದ್ರದ ಒಂದು ಕಾಯಿದೆಯಲ್ಲಿ ಎಲೆಕ್ಟ್ರಿಸಿಟಿ ಬೋರ್ಡಿಗೆ ಸಾಲ ತೆಗೆದುಕೊಳ್ಳತಕ್ಕ ಅಧಿಕಾರ ಕೊಡಲಾಗಿದೆ. ಅದರಲ್ಲಿ ಸಹಿತ ಒಂದು ಮಿತಿಯನ್ನು ಇಟ್ಟಿದ್ದಾರೆ. ಎಷ್ಟು ಹಣ ತೆಗೆದುಕೊಳ್ಳಬೇಕು, ಹೆಚ್ಚು ಹಣ ಬೇಕಾದರೆ ಯಾವ ರೀತಿಯಾಗಿ ತೆಗೆದುಕೊಳ್ಳಬೇಕು ಎನ್ನುವ ಕೆಲವು ಕಟ್ಟಳೆಗಳನ್ನು ಆ ಕಾಯಿದೆಯಲ್ಲಿ ನಾವು ನೋಡುತ್ತೇವೆ. ಅದೂ ಅಲ್ಲದೆ ಈ ಸಭೆ ಸರ್ಕಾರಕ್ಕೆ ಅಧಿಕಾರ ಕೊಟ್ಟರೆ, ಸರ್ಕಾರ ಎಷ್ಟು ಹಣ ಕೊಟ್ಟಿತು, ಬೋರ್ಡ್ ಎಷ್ಟು ಹಣ ಉಪಯೋಗಿಸಿಕೊಂಡಿತು ಎನ್ನುವುದು ಗೊತ್ತಾಗುವುದಿಲ್ಲ. ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಸಭೆಯ ಮುಂದೆ ಇಡುತ್ತೇವೆಂದು ಸರ್ಕಾರ ಹೇಳಬಹುದು. ಕೇಂದ್ರದ ಕಾಯಿದೆಯ ಪ್ರಕಾರ ಎಲೆಕ್ಟ್ರಿಸಿಟಿ ಬೋರ್ಡಿಗೆ ಸಾಲ ಎತ್ತಲು ಅಧಿಕಾರವನ್ನು ಕೊಟ್ಟಿದ್ದರೂ ಹೆಚ್ಚು ಹಣ ಬೇಕಾದರೆ ಈ ಲೆಜಿಸ್ಲೇಚರ್ ಮಂಜೂರಾತಿ ಬೇಕು ಎನ್ನುವ ಮಾತು ಆ ಕಾಯಿದೆಯಲ್ಲಿದೆ. ಅಂಥ ಒಂದು ನಿಯಮವನ್ನು ಈ ಕಾಯಿದೆಗೂ ಸಹ ಅನ್ವಯಿಸಬೇಕು. ಏಕೆಂದರೆ ಲೆಜಿಸ್ಲೇಚರ್ ಕಂಟ್ರೋಲ್ ಉಳಿಯುತಕ್ಕ ವ್ಯವಸ್ಥೆ ಈಗ ತಂದಿರುವ ತಿದ್ದುಪಡಿ ಕಾಯಿದೆಯಲ್ಲಿ ಇಲ್ಲ. ಸಾಲವನ್ನು ಪಡೆಯುವುದಕ್ಕೆ ಒಂದು ಮಿತಿ ಇದ್ದೂ ಕೂಡ, ಅದಕ್ಕೆ ಕಟ್ಟಳೆ ಇದ್ದರೂ ಸಹಿತ ಎಲೆಕ್ಟ್ರಿಸಿಟಿ ಬೋರ್ಡ್ 50 ಕೋಟಿ ರೂಪಾಯಿವರೆಗೆ ಸಾಲ ಮಾಡಿತು. ಆದರೆ ಅವರಿಗೆ ಸ್ಯಾಂಕ್ಷನ್ ಮಾಡಿದ್ದು 30 ಕೋಟಿ ರೂಪಾಯಿ ಮಾತ್ರ. 20 ಕೋಟಿ ರೂಪಾಯಿಗಳವರೆಗೆ ಹಣವನ್ನು ಹೆಚ್ಚಾಗಿ ಸಾಲ ತೆಗೆದುಕೊಳ್ಳುವವರೆಗೆ ಸರ್ಕಾರದ ಗಮನಕ್ಕೇ ಅಂಥ ವಿಷಯ ಬರಲಿಲ್ಲ. ಈಗ ಸರ್ಕಾರಕ್ಕೆ ಇಂಥ ಒಂದು ಅಧಿಕಾರವನ್ನು ಕೊಟ್ಟರೆ ಬೋರ್ಡಿನವರು ಸಹಿತ ಅಂಥ ವ್ಯವಹಾರ ಮಾಡಬಹುದು. ಸರ್ಕಾರಕ್ಕೆ ಸಹಿತ ಅಂಥ ವಿಷಯ ತಿಳಿಯದೆ ಇರಬಹುದು. ಅದಕ್ಕಾಗಿ ಪ್ರತಿಯೊಂದು ಸಲ ಅವರಿಗೆ ಬೇಕಾದಾಗಲೂ ಆ ವಿಷಯವನ್ನು ಈ ಸಭೆಯ ಗಮನಕ್ಕೆ ತಂದು, ಸಭೆಯು ಅಪ್ಪಣೆ

† Indicates that the remarks or speeches have not been revised by the member concerned.

ಯನ್ನು ಪಡೆದು ಬೇಕಾದರೆ ತೆಗೆದುಕೊಳ್ಳಬಹುದು. ಈ ಕ್ಲಾಜ್ ನಣ್ಣದು ಎಂದು ಕಾಣಬಹುದು. ಇದು ಮನಿ ಬಿಲ್ ಎನ್ನುವುದನ್ನು ನಾವು ಗಮನದಲ್ಲಿ ಇಡಬೇಕು. ಸರ್ಕಾರ ಬೋರ್ಡಿನವರು ಎತ್ತುವ ಸಾಲಕ್ಕೆ ಷ್ಯೂರಿಟಿಯಾಗಿ ನಿಂತು ಸೆಕ್ಯೂರಿಟಿ ಕೊಡಬೇಕಾಗುತ್ತದೆ. ಅದಕ್ಕಾಗಿ ಇದು ಒಂದು ಮಹತ್ವವಾದ ಬಿಲ್ ಇದ್ದ ಕಾರಣ, ಇದನ್ನು ನಾವು ಸರಿಯಾಗಿ ತಿದ್ದುಪಡಿ ಮಾಡಿ ಬೋರ್ಡಿಗೆ ಸಾಲ ಎತ್ತಲು ಅವಕಾಶ ಕೊಡುವುದಕ್ಕೆ ಒಂದು ಮಿತಿಯನ್ನು ಹಾಕಿಕೊಳ್ಳಲೇಬೇಕು. ಎಷ್ಟು ದುಡ್ಡಿನವರೆಗೆ ಸ್ಯಾಂಕ್ಷನ್ ಕೊಡಬೇಕು, ಹೆಚ್ಚಿನ ಸಾಲ ತರಬೇಕಾದ ಪರಿಸ್ಥಿತಿಯಲ್ಲಿ ಈ ಮಾನ್ಯ ಸಭೆಯು ಅನುಮತಿ ಇಲ್ಲದೆ, ಸ್ಯಾಂಕ್ಷನ್ ಇಲ್ಲದೆ ತೆಗೆದುಕೊಳ್ಳಬಾರದು ಎನ್ನುವ ತಿದ್ದುಪಡಿಯನ್ನು ತಂದರೆ ಯಾವತ್ತಿಗೂ ಇಂಥ ತಿದ್ದುಪಡಿಯನ್ನು ಸ್ವಾಗತಿಸುವುದಕ್ಕೆ ಸಿದ್ಧನಾಗಿದ್ದೇನೆ. ಸರ್ಕಾರಕ್ಕೇ ಎಲ್ಲ ಅಧಿಕಾರವನ್ನೂ ಇಟ್ಟುಕೊಳ್ಳಲಾಗುತ್ತದೆ, ರೂಲ್ಸ್ ಸಹಿತ ಸರ್ಕಾರದವರೇ ಮಾಡುತ್ತಾರೆ, ಎಷ್ಟು ಹಣ ತರಬೇಕು, ಯಾವರೀತಿಯಿಂದ ತರಬೇಕು ಎನ್ನುವುದನ್ನು ನಿಯಮಗಳಲ್ಲಿ ನೋಟಿಫೈ ಮಾಡಿ ಕ್ರಮ ತೆಗೆದುಕೊಳ್ಳಲು ಅಧಿಕಾರವನ್ನು ಡೆಲಿಗೇಟ್ ಮಾಡಿ, ಲೆಜಿಸ್ಲೇಚರ್‌ಗೆ ಯಾವ ರೀತಿಯ ಹತೋಟಿಯೂ ಇರಬಾರದು ಎನ್ನುವಂಥ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಆದರ ಬದಲಾಗಿ ಮಾನ್ಯ ಮಂತ್ರಿಗಳು ಇಷ್ಟು ಹಣ ಸಾಲ ಪಡೆಯಲು ಈ ಸಭೆಯ ಅಪ್ಪಣೆ ಬೇಕು, ಅದರ ಮೇಲೆ ಹೆಚ್ಚಾಗಿ ಬೇಕಾಗಿದ್ದರೆ ಲೆಜಿಸ್ಲೇಚರ್ ಮುಂದೆ ತರುತ್ತೇವೆ ಮತ್ತು ಅವರ ಅಭಿಪ್ರಾಯದ ಪ್ರಕಾರ ಸಾಲ ತರುತ್ತೇವೆ ಎನ್ನುವ ಮಾತನ್ನು ಒಪ್ಪಿದರೆ ನಾನು ಇದನ್ನು ಸ್ವಾಗತಿಸಬಹುದು. ಇಲ್ಲದೆ ಇದ್ದರೆ ನಾನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಈ ಒಂದು ತಿದ್ದುಪಡಿ ಮನಸೂದೆ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಒಂದು ಸಾಧಾರಣವಾದ ಮಸೂದೆ; ಅಂಥ ಒಂದು ಮೂಲಭೂತವಾದ ಮಸೂದೆ ಅಲ್ಲ ಎನ್ನುವಷ್ಟು ಮಾತನಾಡಿದ್ದಾರೆ. ಅಷ್ಟೇ ಅಲ್ಲ, ಬೆಂಗಳೂರು ನಗರ ಟ್ರಸ್ಟ್ ಬೋರ್ಡ್ ಇನ್ನೂ ಹೆಚ್ಚು ತನ್ನ ಚಟುವಟಿಕೆಗಳನ್ನು ವಿಸ್ತರಿಸುವುದಕ್ಕೋಸ್ಕರವಾಗಿ ಹಣವನ್ನು ಸಾಲ ಪಡೆಯುವುದಕ್ಕೆ ಈ ಮಸೂದೆಯನ್ನು ತರಲಾಗಿದೆ, ಆ ರೀತಿಸಾಲ ತರುವುದಕ್ಕೆ ಅವಕಾಶವಿಲ್ಲದೆ ಇರುವುದರಿಂದ ಈ ಮಸೂದೆಯನ್ನು ತೆಗೆದುಕೊಂಡು ಬಂದಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ನಾನಾದರೂ ಇವತ್ತು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಹೆಚ್ಚು ಹಣ ಕೊಡಬೇಡಿ ಎಂದು ಹೇಳುತ್ತಾ ಇಲ್ಲ. ಇಲ್ಲಿ ಹಣ ಕೊಡುವುದು ಮೂಲಭೂತವಾದ ಪ್ರಶ್ನೆಯಲ್ಲ. ಪ್ರಶ್ನೆ ಏನೆಂದರೆ, ಈ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಏನಿದೆ, ಅದು ಯಾವ ರೀತಿ ನಡೆಯುತ್ತಿದೆ, ಮತ್ತು ಯಾವ ರೀತಿ ಆಲ್ಲ ಕಡಿತ ನಡೆಯುತ್ತಿದೆ ಎನ್ನುವುದನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆ ಮಾಡಿದರೆ, ಈ ಮಸೂದೆಯನ್ನು ತರಬೇಕಾಗಿತ್ತೇ ಎನ್ನುವ ಸಂಶಯ ಬರುತ್ತದೆ, ಮತ್ತು ಇದನ್ನು ತರಬೇಕಾಗಿಲ್ಲವೆನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದರೂ ಸಹ ಇದನ್ನು ತಂದ ಮೇಲೆ ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳದಿದ್ದರೆ, ಅದು ಔಚಿತ್ಯವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಮಾತನಾಡುತ್ತೇನೆ. ಇವರಿಗೆ ಏತಕ್ಕೋಸ್ಕರ ಹಣ ಬೇಕಾಗುತ್ತದೆ ಅಂದರೆ ಬೆಂಗಳೂರಿನ ನುತ್ತಮುತ್ತಲೂ ಲೇ ಔಟ್ ಮಾಡುವುದಕ್ಕೋಸ್ಕರ ಹಣ ಬೇಕಾಗುತ್ತದೆ ಮತ್ತು ಅದರಿಂದ ಸ್ಕೆಟ್‌ಗಳನ್ನು ಮಾಡಿ, ಕಡಿಮೆ ಬೆಲೆಯಲ್ಲಿ ವಿತರಣೆ ಮಾಡುವುದಕ್ಕೆ ಹಣ ಬೇಕಾಗುತ್ತದೆ. ಅಡ್ಮಿನಿಸ್ಟ್ರೇಷನ್ನಿಗೆ ಹಣ ಬೇಕಾಗುತ್ತದೆ ಎಂದೆಲ್ಲಾ ಕೇಳುತ್ತಿದ್ದಾರೆ, ನಾನು ತಿಳಿದುಕೊಂಡ ಹಾಗೆ, ಇಲ್ಲಿ ನಿಜವಾಗಿಯೂ ಆಗುತ್ತಿರುವುದು ಏನೆಂದರೆ, ಈ ಲೇ ಔಟ್‌ಗಳನ್ನು ಮಾಡುವುದಕ್ಕೆ ಕಂಟ್ರಾಕ್ಟರುಗಳಿಗೆ ಅಧಿಕಾರ ಕೊಟ್ಟುಬಿಟ್ಟು, ಅಲ್ಲಿ ಒಂದು ಕಂಟ್ರಾಕ್ಟರುಗಳ ರಾಜ್ಯವೇ ಆಗಿದೆ. ಆದರೆ ಅವರು ಮಾಡಿದಂತಹ ಕೆಲಸಗಳು ಎಲ್ಲಾ ಅರ್ಧಂಬರ್ಧ. ಲೇ ಔಟ್ ಸರಿಯಾಗಿಲ್ಲ, ಡ್ರೈನೇಜ್ ಸರಿಯಾಗಿಲ್ಲ, ಯಾವುದೂ ಸರಿಯಾಗಿಲ್ಲ. ಉದಾಹರಣೆಗೆ ಹೇಳುವುದಾದರೆ ಸುಬ್ರಹ್ಮಣ್ಯ ನಗರ, ರಾಜಾಜಿನಗರ 2ನೇ ಸ್ಟೇಜ್ ಇವುಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ, ಅವರು ಮಾಡಿರುವುದು ಸರಿಯೇ, ತಪ್ಪೇ ಎಂದು. ಮಾನ್ಯ ಮಂತ್ರಿಯವರು ಒಂದು ದಿವಸ ಅಲ್ಲಿಗೆ ಬಂದರೆ ಗೊತ್ತಾಗುತ್ತದೆ. ಅಲ್ಲಿ ಕೊಳಚೆ ನೀರು ಹರಿಯುತ್ತಾ ಇದೆ. ಇವತ್ತು ನೀವು, ತಮಗೆ ಬೇಕಾದವರಿಗೆ ಈ ಕಂಟ್ರಾಕ್ಟ್‌ಗಳನ್ನು ಕೊಟ್ಟು, ಈ ರೀತಿಯ ಒಂದು ಅವ್ಯವಸ್ಥೆಯನ್ನು ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಹೀಗಿದ್ದರೆ, ನಾವು ಯಾಕೆ ಇದಕ್ಕೆ ಹಣ ಕೊಡಬೇಕು ? ಇದರಿಂದ ಏನಾಗುತ್ತದೆ ಅಂದರೆ, ಕೆಲವರು ಬೇಕಾದಷ್ಟು ದುಡ್ಡು ಮಾಡಿಕೊಳ್ಳುತ್ತಿದ್ದಾರೆ. ಕಂಟ್ರಾಕ್ಟರು ಮಾತ್ರವಲ್ಲದೆ, ಇತರ ಜೊತೆಗೆ ಕೆಲವು ಅಧಿಕಾರಿಗಳೂ ಸಹ ದುಡ್ಡು ಮಾಡಿಕೊಳ್ಳುತ್ತಿದ್ದಾರೆ. ನಿನ್ನೆಯ ದಿವಸ ಏನೂ ಇಲ್ಲದಿದ್ದ ಜನರು ಈ ಹೊತ್ತಿನ ದಿವಸ ನೋಡಿದರೆ, ಎರಡು, ಮೂರು ಲಕ್ಷ ರೂಪಾಯಿಯ ಆಸ್ತಿಯನ್ನು ಮಾಡಿಕೊಂಡಿದ್ದಾರೆ, ಈ ಅಧಿಕಾರಿಗಳು. ಈ ರೀತಿಯಾಗಿದೆ ಇವತ್ತು ಈ ಟ್ರಸ್ಟ್ ಬೋರ್ಡಿನ ವಿಚಾರ. ಈ ತಪ್ಪಹ ಮಾಡಿಕೊಳ್ಳುವುದಕ್ಕೆ

(ಶ್ರೀ ಎಂ. ಎಸ್. ಕೃಷ್ಣನ್)

ಯಾಕೆ ಹಣ ಕೊಡಬೇಕೆಂದು ಕೇಳುತ್ತಿದ್ದೇನೆ. ಮೂಲಭೂತವಾದ ಉದ್ದೇಶವೇನು? ಟ್ರಸ್ಟ್ ಬೋರ್ಡಿನವರು ಲೇ ಔಟ್ ಮಾಡಿ ಕಡಿಮೆ ಬೆಲೆಗೆ ಸೈಟ್ ಮಾಡತಕ್ಕಂತಹದ್ದು. ಒಂದೆರಡು ವರ್ಷಗಳ ಹಿಂದೆ 10-12 ರೂಪಾಯಿ ಚದರ ಗಜಕ್ಕೆ ದರ ಇದ್ದರೆ, ಇವತ್ತು ರೂ 15-20-25ರ ವರೆಗೆ ಹೋಗಿದೆ. ಇನ್ನು ಮುಂದೆಯೂ ಯಾವ ಬಡಾವಣೆಯಲ್ಲಿಯೂ ಸೈಟ್ ಮಾಡಿದರೆ, ಅದರ ದರ ಚದರ ಗಜಕ್ಕೆ 25 ರೂಪಾಯಿಂದ ಕಡಿಮೆಯಾಗುವುದಿಲ್ಲವೆಂದು ಮೊನ್ನೆ ತಾನೇ ಅದರ ಛೇರ್‌ಮೆನ್‌ರವರು ನನಗೆ ಹೇಳಿದರು, ಅದು ಕೂಡ, ನಗರದಿಂದ 2-3-4 ಮೈಲ ದೂರವಿರುತ್ತದೆ. ಅಲ್ಲಿ ಯಾವನಾದರೂ ಒಬ್ಬ ಕಾರ್ಮಿಕನೋ ಸರ್ಕಾರಿ ನೌಕರನೋ ಅಥವಾ ಇತರ ಬಡ ಜನರೋ ಸೈಟ್ ತೆಗೆದುಕೊಂಡು ಮನೆ ಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿದೆಯೋ? ಇನ್ನೊಂದು ಏನೆಂದರೆ, ಒಂದು ವೇಳೆ ಹಾಗೆ ಮನೆ ಮಾಡಿಕೊಂಡರೂ, ಅವರಿಗೆ ಸಿಟಿಗೆ ಬರುವುದಕ್ಕೆ ಸರಿಯಾದ ಅನುಕೂಲ ಇಲ್ಲವಾಗಿದೆ. ಹೀಗೆ ಇರುವಾಗ ಸೈಟಿನ ದರ ಚದರ ಗಜಕ್ಕೆ 12-15 ಇದ್ದದ್ದು 25 ರೂಪಾಯಿ ಏಕೆ ಮಾಡಬೇಕಾಗಿತ್ತು? ಅದಕ್ಕೆ ಕಾರಣರು, ಈ ಕಂಟ್ರಾಕ್ಟರುಗಳೇ. ಇವರ ಹಾವಳಿಯಿಂದ ಎಸ್ಟಿಮೇಟ್ ಪುನರ್ ಏಮರ್ಕೆ ಯಾಗುತ್ತದೆ ಮತ್ತು ಅದಕ್ಕೆ ಬೇಕಾದಂತಹ ಬಿಲ್ಲನ್ನು ಇವರು ಸ್ಯಾಂಕ್ಷನ್ ಮಾಡುತ್ತಾರೆ. ಅದರಿಂದ ಸೈಟಿನ ಬೆಲೆ ಜಾಸ್ತಿಯಾಗುತ್ತದೆ ಮತ್ತು ಬಡ ಜನರಿಗೆ ಕೊಂಡುಕೊಳ್ಳಲು ಬಹಳ ದುಬಾರಿಯಾಗುತ್ತದೆ. ಚೇರ್‌ಮನ್ ಸಾಹೇಬರೇ ಒಪ್ಪಿಕೊಳ್ಳುತ್ತಾರೆ, ಏನೆಂದರೆ, ಈ ರೀತಿ ಕಂಟ್ರಾಕ್ಟರುಗಳ ರೇಟ್ ಜಾಸ್ತಿಯಾಗಿರುವುದರಿಂದ, ಸೈಟಿನ ದರ ಕೂಡ ಜಾಸ್ತಿಯಾಗುತ್ತದೆಂದು. ಇನ್ನು ಕೆಲವು ಸೈಟುಗಳನ್ನು ಹರಾಜು ಮಾಡುತ್ತೀರಿ. ಅದನ್ನು ಕೆಲವು ಜನರು ಕೊಂಡುಕೊಳ್ಳುತ್ತಿದ್ದಾರೆ, ಈ ಹರಾಜಿನಲ್ಲಿ ಕೊಂಡುಕೊಳ್ಳುವವರು ಯಾರು? ಅವರು ಸಾಮಾನ್ಯ ತರಗತಿಯ ಜನರಲ್ಲ. ಯಾರು ಬೇಕಾದಷ್ಟು ಮನೆ ಮಠಗಳನ್ನು, ಸೈಟುಗಳನ್ನು ಇಟ್ಟುಕೊಂಡು ಇರುತ್ತಾರೋ ಅಂಥವರೇ ಈ ಹರಾಜಿನ ಸೈಟುಗಳನ್ನು ಕೊಂಡುಕೊಂಡು, ಇನ್ನೂ ಹೆಚ್ಚು ಬೆಲೆಗೆ ಮಾರುತ್ತಾರೆ, ಇಲ್ಲವೇ ಮನೆಗಳನ್ನು ಕಟ್ಟಿಸಿಕೊಂಡು ಬಾಡಿಗೆಗಳನ್ನು ಸಂಪಾದಿಸುತ್ತಾರೆ. ಇದರಿಂದ ಶ್ರೀಮಂತರಾದ ಜನರಿಗೆ ಅನುಕೂಲವಲ್ಲದೆ, ಮಧ್ಯಮ ತರಗತಿ ಅಥವಾ ಬಡ ಜನರಿಗೆ ಯಾವ ಪ್ರಯೋಜನವೂ ಇಲ್ಲ. ಶ್ರೀಮಂತರನ್ನು ಇನ್ನೂ ಶ್ರೀಮಂತರನ್ನಾಗಿ ಮಾಡುತ್ತಿದ್ದೀರಿ. ಈ ಪರಿಸ್ಥಿತಿ ಇರಬೇಕಾದರೆ, ನಾವು ಯಾಕೆ ಅನ್ಯಾಯ ರೀತಿಯಲ್ಲಿ ನಡೆಯಬೇಕು ಇಂಥ ಕಾರ್ಯಗಳಿಗೆ ಹಣ ಕೊಡಬೇಕೆಂದು ಕೇಳುತ್ತೇನೆ.

ಇನ್ನೊಂದು ಅಂಶವೇನೆಂದರೆ, ತಮಗೆಲ್ಲಾ ಗೊತ್ತಿರುವ ಹಾಗೆ ಟ್ರಸ್ಟ್ ಬೋರ್ಡಿನವರು ಸೈಟು ಮಾಡುತ್ತಾರೆ, ಲೇ ಔಟ್ ಮಾಡುತ್ತಾರೆ. ಆಮೇಲೆ ಅದನ್ನು ಕಾರ್ಪೊರೇಶನ್ನಿಗೆ ಕೊಡಬೇಕೆಂದು ಇದೆ. ಕೆಲವು ಕಡೆ ಕೊಡುತ್ತಿದ್ದಾರೆ. ಆದರೆ ಹೆಚ್ಚಾಗಿ ಏನಾಗಿದೆ ಅಂದರೆ, ಟ್ರಸ್ಟ್ ಬೋರ್ಡ್ ಲೇ ಔಟ್ ಹಾಗೆಯೇ ಉಳಿದಿದೆ. ಇವತ್ತಿನ ವರೆಗೆ ಅದನ್ನು ಕಾರ್ಪೊರೇಶನ್ನಿಗೆ ಕೊಟ್ಟಿಲ್ಲ. ಇವತ್ತು ದುಡ್ಡು ಬೇಕೆಂದು ಕೇಳುವಾಗ ನಾವು ಇದನ್ನೆಲ್ಲಾ ಹೇಳಬೇಕಾಗುತ್ತದೆ. ಸಾಲ ಮಾಡಬೇಕೆಂದಿದ್ದರೆ, ಅದು ಒಳ್ಳೆಯ ಕಾರಣಗಳಿಗಾಗಿ ಆಗಬೇಕಾಗುತ್ತದೆ. ಹಾಗಿದ್ದರೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಇವರು ಇಲ್ಲಿ ಮಾಡುತ್ತಿರುವುದು ಸರಿಯಾದ ಕೆಲಸವಲ್ಲ, ಮತ್ತು ಇದರಿಂದ ಸಾಮಾನ್ಯ ಜನರಿಗೆ ಅನುಕೂಲವಿಲ್ಲ. ಇಲ್ಲಿ ಅನೀತಿ, ಅನಾಚಾರ, ಭ್ರಷ್ಟಾಚಾರ, ನೌಕರ ಶಾಹಿವರ್ತನೆ ಇವು ಎಲ್ಲಾ ತುಂಬಿ ತುಳುಕಾಡುತ್ತಿವೆ. ಇವತ್ತು 6-7 ಲೇ ಔಟುಗಳನ್ನು ಇನ್ನೂ ಕಾರ್ಪೊರೇಶನ್ನಿಗೆ ಬಿಟ್ಟುಕೊಟ್ಟಿಲ್ಲ. ಅಲ್ಲಿ ಸರಿಯಾದ ನೀರಿಲ್ಲ, ರೋಡುಗಳು ಇಲ್ಲ, ಮತ್ತು ಡ್ರೈನೇಜ್ ಇಲ್ಲ. ಇಂಥ ಪರಿಸ್ಥಿತಿ ಬೆಂಗಳೂರು ನಗರದ ಒಳಗಡೆ ಇರಬೇಕಾದರೆ, ನಮಗೆ ಹಣ ಬೇಕು, ಎಂದು ಶಾಸನಸಭೆಯನ್ನು ಕೇಳಿದರೆ ಯಾಕೆ ಕೊಡಬೇಕು? ಮೊದಲು ಇವನ್ನೆಲ್ಲಾ ಸರಿಪಡಿಸಬೇಕು, ಆಮೇಲೆ ಕೊಡುತ್ತೇವೆ.

ಇನ್ನು ಸಾಲ ಮಾಡುವುದು ಕೂಡ ಹೇಗೆ? ಮಾನ್ಯ ನಾಗಪ್ಪನವರು ಹೇಳಿದಹಾಗೆ ಸ್ಟೇಟ್ ಸಾಲ ಮಾಡುವುದು ಹೇಗೆ? ಘಟನಾವಳಿಯ ಆರ್ಟಿಕರ್ 293ರ ಪ್ರಕಾರ ಸ್ಟೇಟ್ ಸಾಲ ಮಾಡಬೇಕಾದರೆ, ಅಲ್ಲಿ ಈ ರೀತಿ ಹೇಳುತ್ತದೆ:

> "subject to the provisions of this article, the executive power of a State extends to borrowing within the territory of India upon the security of the Consolidated Fund of the State within such limits, if any, as may from time to time be fixed

by the Legislature of such State by law and to the giving of guarantees with such limits, if any, as may be so fixed."

ಅಂದರೆ ರಾಜ್ಯ ಸರ್ಕಾರ ಲೋನ್ ಪಡೆಯಬೇಕಾದರೆ, ಇವರು ಸ್ಟೇಟ್ ಲೆಜಿಸ್ಲೇಚರನ್ನು ಕೇಳಿ ಪಡೆಯಬೇಕು. ಆದರೆ ಇಲ್ಲಿ ಇವರು ಪಡೆಯುವಂತ ರೀತಿಯಲ್ಲಿ ಸರ್ಕಾರ ತಾನೇ ತೀರ್ಮಾನ ಮಾಡಿ ಎಷ್ಟು ಬೇಕಾದರೂ ಲೋನ್ ರೈಸ್ ಮಾಡಬಹುದು. ಇದಕ್ಕೆ ಬಿತ್ತಿ ಎಷ್ಟು ಏನೆಂದು ಗೊತ್ತಿಲ್ಲ ಸೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳುತ್ತಾರೆ:

"The City Improvement Trust Board, Bangalore, desires to borrow money from Schedule Banks, Life Insurance Corporation, etc....."

ಅಂದರೆ ಸಿಂಧಿಯವರಿಂದ ಪಡೆಯಬಹುದು, ಮಾರ್ವಾಡಿಯ ಹತ್ತಿರ ಹೋಗಬಹುದು, ಟಾಟಾ ಹತ್ತಿರ ಬೇಕಾದರೂ ಹೋಗಬಹುದು. ಯಾಕೆ ಎಜ್ಸೆಟ್ರಾ ಎಂದು ಸೇರಿಸಿದ್ದೀರಿ? ನೀವು ನಿಯಾಗಿ ಹೇಳಿ. ಬ್ಯಾಂಕ್ ರೇಟಾದರೆ ನಮಗೆ ಗೊತ್ತಿದೆ. ಆದರೆ ಎಜ್ಸೆಟ್ರಾ ಎಂದು ಸೇರಿಸಿದ್ದರಿಂದ ನೀವು ಏನು ಬೇಕಾದರೂ ಮಾಡಬಹುದು. It is after all a piece of legislation. I cannot agree if you use a word which may give any interpretation; because you cannot use it in whatever manner you like. Cases have gone to the Supreme Court as you very well know. ಹೀಗಿರಬೇಕಾದರೆ, ಈ ರೀತಿ ಅನೀತಿಯುತವಾಗಿ ನಡೆಯುವುದರಿಂದ ಇದು ಸರಿಯಾದುದಲ್ಲ ಮತ್ತು ಆ ಒಂದು ದೃಷ್ಟಿಯಿಂದ ಈ ಮಸೂದೆಯನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

9-00 A.M.

ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿನವರು ಹಣವನ್ನು ಸಾಲವಾಗಿ ತೆಗೆದುಕೊಳ್ಳುವುದಕ್ಕೆ ಈ ಒಂದು ಮಸೂದೆಯನ್ನು ತಂದಿರುವುದನ್ನು ನಾನು ಸ್ವಾಗತಮಾಡಿ ಎರಡು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಈಗ ಇರತಕ್ಕ ಟ್ರಸ್ಟ್ ಬೋರ್ಡ್ ಅನೇಕ ವರ್ಷಗಳಿಂದಲೂ ಕೆಲಸಮಾಡುತ್ತಿದೆ. ಸರ್ಕಾರದವರು ಬಹಳ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೆ ಬಡವರು ಮುಂದೆ ಬರಬೇಕೆಂದು ಹೇಳುತ್ತಿರುವಾಗ, ಬಡವರಿಗೇ ಸರಿಯಾಗಿ ಪ್ಲಾಟ್ಸ್ ಸಿಗುತ್ತಾ ಇಲ್ಲ. ಅಲ್ಲಿ ಜನಗಳ ಪ್ರತಿನಿಧಿಗಳು ಯಾರೂ ಇಲ್ಲ. ಅವರಿಗೆ ಯಾರ್ಯಾರು ಬೇಕಾಗಿದ್ದಾರೋ ಅಂತಹವರನ್ನು ಅಲ್ಲಿಗೆ ನಾಮಿನೇಟ್ ಮಾಡಿ ಹಾಕಿದ್ದಾರೆ. ಅವರಿಗೆ ಬಡವರ ಕಷ್ಟಸುಖಗಳೇನೆಂದು ಗೊತ್ತಾಗುವುದಿಲ್ಲ. ಇವತ್ತಿನ ದಿವಸ ಶ್ರೀಮಂತರಿಗೇ ಬೇಕಾದಷ್ಟು ಪ್ಲಾಟುಗಳು ರಿಟೇಟ್‌ಗಳಲ್ಲಿ ಸಿಕ್ಕಿವೆ. ಅಲ್ಲಿ ಅವರು ಬೇಕಾದಷ್ಟು ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟು ಹಣ್ಣಿಗೆ ದುಡ್ಡನ್ನು ಸಂಪಾದನೆಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಹಿಂದೆ ಅಲ್ಲಿ ಒಬ್ಬ ಚೇರ್‌ಮನ್ ಇದ್ದಾಗ, ಅವರೇ ಇಂತಹ ಕಲಸಗಳನ್ನು ಮಾಡಿದ್ದರಿಂದ ಅವರನ್ನು ಕೆಳಗೆ ಇಳಿಸಿದರು. ಅಂದಿನಿಂದ ಬಡವರಿಗೆ ಪ್ಲಾಟುಗಳು ಸಿಗುತ್ತಿದ್ದುವು. ಇವತ್ತಿನದಿವಸ ಆ ರೀತಿ ಇಲ್ಲ ಏಕೆಂದರೆ ಅಲ್ಲಿ ಇವತ್ತು ಜನಗಳ ಪ್ರತಿನಿಧಿಗಳು ಯಾರೂ ಇಲ್ಲ. ಬೇಕಾದರೆ ಸರ್ಕಾರದವರು ವೆರಿಫೈ ಮಾಡಲಿ. ಪ್ಲಾಟುಗಳನ್ನು ಈಗ ಹೆಚ್ಚಿಗೆ ಬಡವರಿಗೆ ಕೊಟ್ಟಿದ್ದಾರೋ ಅಥವಾ ಹಣವಂತರಿಗೆ ಕೊಟ್ಟಿದ್ದಾರೋ ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳಲಿ. ನಾನು ಕಾರ್ಪೋರೇಟರ್ ಆಗಿ ಅನೇಕ ವರ್ಷಗಳ ಕಾಲ ಕಾರ್ಪೋರೇಷನ್ನಿನಲ್ಲಿದ್ದುದರಿಂದ ನನಗೆ ರೇಟ್ ಮಾಡುವ ಅನುಭವವಿದೆ. ಕಾರ್ಪೋರೇಷನ್ನಿನಿಂದ ರಸ್ತೆಗಳಿಗಾಗಿ ಮತ್ತು ಡ್ರೈನ್‌ಗಳಿಗಾಗಿ ಎಷ್ಟೋ ಹಣವನ್ನು ಖರ್ಚುಮಾಡಿದ್ದಾರೆ. ರೇಟಿಟ್‌ಗಳನ್ನು ಮಾಡುವುದಕ್ಕೆ ಹೆಚ್ಚು ದುಡ್ಡನ್ನು ಕಾರ್ಪೋರೇಷನ್ ಸುರಿದಿದೆ. ಡ್ರೈನುಗಳಲ್ಲಿ ಸರಿಯಾಗಿ ನೀರು ಹೋಗುವುದಿಲ್ಲ. ಅನೇಕ ಕಡೆಗಳಲ್ಲಿ 2 ಇಂಚು, 1 ಇಂಚು ಚಪ್ಪಡಿಗಳನ್ನು ರಸ್ತೆಗಳಲ್ಲಿ ಹಾಕಿದ್ದಾರೆ. ಅದೂ ಅಲ್ಲದೆ ರಸ್ತೆಗಳಲ್ಲಿ ಮಣ್ಣು, ಜಲ್ಲಿ ಅನೇಕ ಕಡೆಗಳಲ್ಲಿ ಹಾಕಿದ್ದಾರೆ. ಏತಕ್ಕೆ ಈ ರೀತಿ ಸರ್ಕಾರದಿಂದ ಹಣವನ್ನು ತೆಗೆದುಕೊಂಡು ಹೋಗಿ ಅನ್ಯಾಯ ಮಾಡುತ್ತಾರೋ ಗೊತ್ತಿಲ್ಲ. ಅಲ್ಲಿ ನ್ಯಾಯವಾಗಿ ಕೆಲಸಮಾಡುವುದಿಲ್ಲ. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಇದೇ ಟ್ರಸ್ಟ್ ಬೋರ್ಡಿನಲ್ಲಿ ಹಿಂದೆ ಒಬ್ಬ ಇಂಜನಿಯರ್ ಲಂಚ ತೆಗೆದು ಕೊಂಡು ಐದಾರು ಸಾವಿರ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಕ್ಕೆ ಸಸ್ಪೆಂಡ್ ಮಾಡಿದ್ದಾರೆ. ಹೀಗೆ ಆಗಲೂ ನಾಗರೀಕರ ದುಡ್ಡನ್ನು ಅಲ್ಲಿ ಬಹಳವಾಗಿ ಅನ್ಯಾಯಮಾಡುತ್ತಿದ್ದಾರೆ.

(ಶ್ರೀ ಎ. ನಂಜಪ್ಪ)

ಒಟ್ಟನಲ್ಲಿ ಅಲ್ಲಿ ಬಡವರಿಗೆ ಅನುಕೂಲವಾಗುವ ಹಾಗೆ ಮಾಡುತ್ತಾ ಇಲ್ಲ. ನಾನು ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಮೂರು ಟರ್ಮ್‌ಗಳು ಇದ್ದೆ. ಒಂದುಸಾರಿ 13 ಲೇಔಟುಗಳನ್ನು ಮಾಡಿದರು. ಅಲಸೂರಿನಲ್ಲಿ ನನ್ನ ಕ್ಷೇತ್ರದಲ್ಲಿ ಒಂದು ಲೇಔಟ್ ಮಾಡಿದಾಗ್ಗೆ ಂಸ್ತೆಗಳು, ಡ್ರೈನ್ಸ್, ಸ್ಯುಯೇಜ್ ವಾಟರ್ ಡ್ರೈನ್ಸ್ ಎಲ್ಲಾ ಮಾಡಿದರು. ಅಲ್ಲಿ ಈಗ ಸೊಳ್ಳೇ ಕಾಟ ಜಾಸ್ತಿಯಾಗಿದೆ. ಟ್ರಸ್ಟ್‌ಬೋರ್ಡಿನಲ್ಲಿ ಈಗ ಆ ಸ್ಥಳವನ್ನು ಪಬ್ಲಿಕ್ ಪರ್ಪಸ್ಸಿಗೆ ಎಂದು ಲೀಜಿಗೆ ಕೊಟ್ಟಿದ್ದಾರೆ. ಅಲ್ಲಿ ಈಗಾಗಲೇ ಕೆಲಸಗಳು ನಡೆಯುತ್ತಿವೆ. ಅಲ್ಲಿ ಅಂಗಡಿಗಳನ್ನು ಕಟ್ಟಿದ್ದಾರೆ. ಇದರ ಬಗ್ಗೆ ನಾನು ಕಾಗದ ಬರೆದು, ತಕ್ಷಣ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದರೂ. ಸುಮಾರು ಎರಡು ವರ್ಷಗಳಿಂದ ಏನೊಂದು ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಲಿಲ್ಲ. ಅಂಗಡಿಗಳನ್ನು ಅನ್‌ಅತರೈಜ್ಡ್‌ಆಗಿ ಕಟ್ಟಿಕೊಂಡು ಅಲ್ಲಿ ರಾಗಿ ಮಿಷನ್ ಹಾಕಿಕೊಂಡಿದ್ದಾರೆ, ಇಂಥಾವ್ಯನ್ನು ಪಬ್ಲಿಕ್ ಪರ್ಪಸ್ಸಿಗಾಗಿ ಅದನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಬೇಕಾದರೆ ಸಂಬಂಧಪಟ್ಟ ಕಾಗದಪತ್ರಗಳನ್ನು ಮಾನ್ಯ ಮಂತ್ರಿಗಳಿಗೆ ತರಿಸಿಕೊಡುತ್ತೇನೆ. ಅಲ್ಲಿ ಇಂತಹ ಅನ್ಯಾಯಗಳು ನಡೆಯುತ್ತಿವೆ. ಇನ್ನೊಂದು ಕಾಗದವನ್ನು ಅಲ್ಲಿನ ನಡೆವಳಿಕೆಗಳ ಬಗ್ಗೆ ಚೇರ್‌ಮನ್‌ರಿಗೆ ಕೊಡಬೇಕೆಂದಿದ್ದೇನೆ. ಈ ದೇಶದ ದುಡ್ಡನ್ನು ಸಾಲದ ರೂಪದಲ್ಲಿ ತೆಗೆದುಕೊಂಡು ಅವರವರಿಗೆ ಬೇಕಾದವರಿಗೆ ಅನುಕೂಲ ಮಾಡಿಕೊಡುವುದು ಬಹಳ ಅನ್ಯಾಯ. ಅಲ್ಲಿ ಈಗ ಏನಾಗುತ್ತಿದೆಯೆಂದರೆ ಅನೇಕ ಕಟ್ಟ ಕೆಲಸಗಳು ನಡೆಯುತ್ತಿವೆ. ಅದರ ಬಗ್ಗೆ ಪೋಲೀಸ್ ವರದಿಯೂ ಸಹ ಇದೆ. ಆದರೂ ಅಲ್ಲಿ ಇನ್ನೂ ಕಂಟ್ರೋಲಿಗೆ ಬಂದಿಲ್ಲ. ಇನ್ನೂ ಈಗಲೂ ಟ್ರಸ್ಟ್ ಬೋರ್ಡಿನವರು ತಮಗೆ ಯಾರು ಬೇಕೋ ಅಂತಹವರಿಗೆ ಆದನ್ನು ಲೀಜ್ ಮೇಲೆ ಕೊಟ್ಟು ಇವತ್ತಿನ ದಿವಸ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಹಾಗೆ ಮಾಡುತ್ತಿದ್ದಾರೆ. ಅಲ್ಲಿ ಟ್ರಸ್ಟ್‌ಬೋರ್ಡಿನವರು ಕಾನೂನು ಪ್ರಕಾರ ನಾವು ಮಾಡುತ್ತಿದ್ದೇವೆಂದು ಹೇಳುತ್ತಾರೆ. ನಾವು ಇಲ್ಲಿ ದುಡ್ಡನ್ನು ಮಂಜೂರು ಮಾಡಿ ಅವರು ಮಾಡುವ ಕೆಟ್ಟ ಕೆಲಸಗಳನ್ನು ಸರ್ಕಾರದವರು ಒಪ್ಪಿಕೊಳ್ಳಬೇಕಾಗಿದೆ. ಇವತ್ತಿನ ದಿವಸ ಅನೇಕ ವರ್ಷಗಳಿಂದ ವಾಟರ್‌ಬೋರ್ಡ್ ವಿಾಟಿಂಗ್ ನಡೆದಿಲ್ಲ. ಅದ್ದರಿಂದ ನೀರಿನ ತೊಂದರೆ ಈಗ ಬಹಳ ಇದೆ. ಹೊಸದಾಗಿ ಲೇಔಟುಗಳನ್ನು ಮಾಡಬೇಡಿ. ಈಗಿರುವ ಲೇಔಟುಗಳನ್ನು ಬಡವರಿಗೆ ಹಂಚಿ. ಆಗ ನಾಗರೀಕರಿಗೆ ಸರಿಯಾಗಿ ನೀರು ಸಿಗುವುದಕ್ಕೆ ಅನುಕೂಲವಾಗುತ್ತದೆ. ಈಗ ಲೇಔಟ್ ಮಾಡಿ ಹೆಚ್ಚು ಹಣ ಅದಕ್ಕಾಗಿ ತೆಗೆದುಕೊಂಡು ಹೋಗಿ ಸುರಿಯುವುದರಿಂದ ಏನೂ ಪ್ರಯೋಜನವಿಲ್ಲ. ಆ ಲೇಔಟ್‌ಗಳಲ್ಲಿ ಪ್ಲಾಟ್ಸ್ ಕೊಟ್ಟು ನೀರು ಇಲ್ಲವೆಂದು ಈಗಾಗಲೇ ಅನೇಕ ಕಡೆಗಳಲ್ಲಿ ಜನರು ಟೀಕೆ ಮಾಡುತ್ತಿದ್ದಾರೆ. ಕುಡಿಯುವ ನೀರಿನ ವಿಷಯವಾಗಿ ಅನೇಕ ಸದಸ್ಯರು ಬೇಕಾದಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಕಷ್ಟ ಪಟ್ಟಿದ್ದಾರೆ. ಅದಕ್ಕಾಗಿ ಕಾವೇರಿಯಿಂದ ನೀರು ಬಂದಮೇಲೆ ಲೇಔಟ್ ಮಾಡಿ ಪ್ಲಾಟುಗಳನ್ನು ಬಡವರಿಗೆ ಹಂಚಬೇಕು. ನಮಗೆ ನೀರು ಇಲ್ಲದೇ ಇರುವಾಗ ಲೇಔಟ್ ಮಾಡಿ ಅದಕ್ಕಾಗಿ ವೃಥಾ ಹಣವನ್ನು ಖರ್ಚುಮಾಡಿದರೆ ಏನು ಪ್ರಯೋಜನ ? ನಾವು ಮಾಡುವ ಕೆಲಸ ನ್ಯಾಯವಾಗಿರಬೇಕು. ನಾಗರೀಕರು ಕುಡಿಯುವುದಕ್ಕೆ ನೀರಿಲ್ಲ ಅಂದರೆ ಬಹು ಕಷ್ಟ. ಏಕೆಂದರೆ ಈಗಾಗಲೇ ಬೆಳೆಯುತ್ತಿದೆ, ಸುತ್ತ ಊರು. ಈಗ ವಾಟರ್ ಮೈನ್‌ಗಳನ್ನು ಹಾಕಬೇಕೆಂದರೆ ಹೆಚ್ಚು ದುಡ್ಡು ಬೇಕಾಗುತ್ತದೆ. ಬಹಳ ಕಷ್ಟ. ಇಂದಿರಾ ನಗರದಲ್ಲಿ ಈಗ ಕುಡಿಯುವುದಕ್ಕೆ ನೀರೇ ಇಲ್ಲ. ಜನರಿಗೆ ಮುಖ್ಯವಾಗಿ ಬೇಕಾಗಿರುವುದು ನೀರು. ನೀರಿಲ್ಲದ ಮೇಲೆ ಏಕೆ ಲೇಔಟ್ ಮಾಡಬೇಕು ? ಇದರಿಂದ ಬಡವರಿಗೆ ಅನುಕೂಲವಾಗಿಲ್ಲ. ಹಣ ಸಂತರಿಗೇ ಅನುಕೂಲವಾಗುತ್ತಿದೆ. ಈ ವಿಚಾರವಾಗಿ ಸರ್ಕಾರದವರು ಆಲೋಚನೆಮಾಡಿ ಒಂದು ನಿರ್ಣಯವನ್ನು ಕೂಡಲೇ ತೆಗೆದುಕೊಳ್ಳಬೇಕು. ದೊಮ್ಮಲೂರಿಗೆ ಮಂತ್ರಿಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅಲ್ಲಿ ಸರ್ಕಾರದ ಎರಡು ಎಕರೆ ಜಮೀನನ್ನು ಯಾರಿಗೋ ಕೊಟ್ಟಿದ್ದಾರೆ. ಅಲ್ಲಿ ಎಲ್ಲಾ ಹರಿಜನರು ಇದ್ದಾರೆ. ಅಂತಹವರಿಗೆ ಅಲ್ಲಿ ನ್ಯಾಯವಾಗಿ ಜಮೀನು ಹಂಚಿಕೆ ಮಾಡಬೇಕು. ಅವರ ಮನೆಯಲ್ಲಿ ಮಕ್ಕಳು ಮರಿಗಳು ಹೇಗೆ ಇರುತ್ತಾರೆಂಬುದನ್ನು ರೆವಿನ್ಯೂ ಮಿನಿಸ್ಟರ್ ಮತ್ತು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ತಿಳಿದುಕೊಳ್ಳಬೇಕು. ಒಬ್ಬ ಗಂಡ, ಹೆಂಡತಿ ಮಲಗಿಕೊಳ್ಳುವುದಕ್ಕೆ ಅಲ್ಲಿ ಸ್ಥಳ ಇರುತ್ತದೆ. ಅಂತಹವರಿಗೆ ಎರಡು ಮಕ್ಕಳಾದರೆ, ಆಗ ಅವರು ಆಚೆ ಮಲಗಿಕೊಂಡು ಮಕ್ಕಳಿಗೆ ಆ ಜಾಗವನ್ನು ಬಿಟ್ಟುಕೊಡಬೇಕಾಗುತ್ತದೆ. ಟ್ರಸ್ಟ್ ಬೋರ್ಡಿನವರು ಅವರಿಗೆ ಏನೂ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಅವರಿಗೆ ಒಂದು ಮನೆಯನ್ನು ಕಟ್ಟಿಕೊಳ್ಳುವುದಕ್ಕೂ ಸ್ಥಳವಿಲ್ಲ. ಮಂತ್ರಿಗಳು ಹೇಳಿದರು 2500 ರೂಪಾಯಿಗಳನ್ನು ಅವರ ಮನೆಗಳಿಗಾಗಿ ಒಬ್ಬೊಬ್ಬರಿಗೂ ಕೊಡುತ್ತೇವೆಂದು. ಅದು ಸುಮಾರು 30 ವರ್ಷಗಳಿಗೆ 5 ಸಾವಿರ ರೂಪಾಯಿಗಳ ಲೆಕ್ಕ ಆಗು

ತ್ತದೆ. ಅದಕ್ಕಾಗಿ ಒಂದು ಸೊಸೈಟಿಯನ್ನು ಸ್ಥಾಪನೆಮಾಡಿ ಎಂದು ಹೇಳಿದರು. ಆಮೇಲೆ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಹತ್ತಿರ ತಿರುಗಿ ಹೋದರೆ, ಸರ್ಕಾರ ಆ ಬಾಬಿಗೆ ದುಡ್ಡು ಕೊಟ್ಟಿದ್ದಾರೆಂದು ಹೇಳಿದರು. ಇವತ್ತಿನ ದಿವಸ ಆ ಇಲಾಖೆಯಲ್ಲಿ ಇನ್‌ಎಫಿಷಿಯನ್ಸಿ ಬಹಳ ಇದೆಯೆಂದು ಅನೇಕ ಜನರು ಹೇಳಿದ್ದಾರೆ. ನಾನು ಇದೇ ಬೆಂಗಳೂರಿನಲ್ಲಿದ್ದುಕೊಂಡು ಅನೇಕ ವರ್ಷಗಳ ಕಾಲ ಬೆಂಗಳೂರು ಕಾರ್ಪೊರೇಷನ್ ಮಾಡಿದಂಥ ಅನೇಕ ಲೇಔಟ್‌ಗಳನ್ನು ನೋಡಿದ್ದೇನೆ. ಕಾರ್ಪೊರೇಷನ್ನಿನಿಂದ ನಿಜವಾಗಿ ದುಡ್ಡು ಬೆಂಗಳೂರಿನ ನಾಗರೀಕರ ಅನುಕೂಲಕ್ಕಾಗಿ ಕೊಡುತ್ತಿಲ್ಲ. ಟ್ಯಾಕ್ಸ್‌ನ ದುಡ್ಡೂ ಸಹ ಲೇಔಟ್ ಮ್ಯಾಪ್‌ಗಳಿಗೆ, ಡ್ರೈನೇಜ್‌ಗಳಿಗೆ ವಿಶೇಷವಾಗಿ ಕೊಟ್ಟಿದ್ದಾರೆ. ಅಷ್ಟು ಮಟ್ಟಿಗಿದೆ ಕಾನೂನು. ಅರ್ಥಮಾಡಿಕೊಳ್ಳಿ. ಹೊಸದಾಗಿ ಅಧಿಕಾರಿಗಳಾದವರು ಏನು ಮಾಡಿದರೂ ಇಂತಹ ಸಂದರ್ಭಗಳಲ್ಲಿ ನಿಜವಾಗಿ ಒಳ್ಳೆಯ ಮನುಷ್ಯರಿಗೆ ಕೆಟ್ಟ ಹೆಸರು ಬರುತ್ತದೆ. ಮುಖ್ಯವಾಗಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಒಂದು ವರ್ಷ ಮಳೆ ಹೋದರೆ ನಮ್ಮ ಬೆಂಗಳೂರು ರಾಟರಿ ಹೊಡೆಯುತ್ತದೆ. ಆದ್ದರಿಂದ ಹೊಸದಾಗಿ ಲೇಔಟ್ ಮಾಡುವುದಕ್ಕೆ ಅನುಮತಿ ಕೊಡಬೇಡಿ. ಸರ್ಕಾರದವರು ಪ್ಲಾಟುಗಳನ್ನು ಕೊಡುವಾಗ ಬಡವರಿಗೆ ಕೊಡುವುದು ಸುಗಮವಾಗಿದೆ. ಏಕೆಂದರೆ ಈಗ ಬಡವರಿಗೆ ಖಂಡಿತವಾಗಿ ಅವು ಹೋಗುತ್ತಾ ಇಲ್ಲ. ಹಣವಂತರಿಗೇ ಹೋಗುತ್ತಿದೆ. ಎಲ್ಲಾ ಪ್ಲಾಟುಗಳಲ್ಲಿಯೂ ಹಣವಂತರೇ ಸೇರಿಕೊಂಡಿದ್ದಾರೆ. ಅದು ಮಾನ್ಯ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ. ಇದು ಇನ್ನು ಮುಂದೆ ಆಗಕೂಡದು. ಬೆಂಗಳೂರು ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಜನಗಳ ಪ್ರತಿನಿಧಿಗಳನ್ನು ಇನ್ನು ಮುಂದೆ ಹಾಕಿ ಬಡವರಿಗೆ ಹೆಚ್ಚಿನಮಟ್ಟಿಗೆ ಅಲ್ಲಿ ಅನುಕೂಲವಾಗುವುದಕ್ಕೆ ಸರ್ಕಾರದವರು ಪ್ರಯತ್ನಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಇದರಲ್ಲಿ ಟ್ರಸ್ಟ್ ಬೋರ್ಡಿನವರು ಸರಕಾರದ ಕಂಟ್ರೋಲಿಗೆ ಒಳಪಟ್ಟು ಎಷ್ಟು ಸಾಲ ಬೇಕೋ ಅಷ್ಟು ಮಾಡಿಕೊಳ್ಳಬಹುದು ಎಂದು ಬಿಲ್ಲು ತಂದಿದ್ದಾರೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಲ್ಲೇ ಇರಲಿ, ಬೆಂಗಳೂರಿನಲ್ಲಿ ಇರಲಿ, ಮೈಸೂರಿನಲ್ಲಿ ಇರಲಿ, ಅದರ ಉದ್ದೇಶ, ನನಗೆ ತಿಳಿದಿರುವ ಪ್ರಕಾರ, ಸ್ಲಂ ಕ್ಲಿಯರೆನ್ಸ್ ಮಾಡಿ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದು, ಮತ್ತು ನೋ ಲಾಸ್ ನೋ ಪ್ರಾಫಿಟ್ ಬೇಸಿಸ್‌ನಲ್ಲಿ ಲೇ ಔಟ್ ಮಾಡಿ ಸಾರ್ವಜನಿಕರಿಗೆ ನಿವೇಶನಗಳನ್ನು ಒದಗಿಸುವುದು. ಈಗ ಈ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡುಗಳು ಪ್ರಜಾನತ್ತಾತ್ಮಕ ರೀತಿಯಲ್ಲಿ ನಡೆಯುತ್ತಾ ಇಲ್ಲ. ಆ ಬೋರ್ಡಿಗೆ ನಾಮಿನೇಷನ್ ಮಾಡಬೇಕಾದರೆ, ಶ್ರೀಮಂತರಿಗೆ ಅವಕಾಶ ಸಿಕ್ಕುತ್ತದೆಯೇ ವಿನಾ ನನ್ನಂತಹವರಿಗೆ ಅವಕಾಶವಿಲ್ಲ. ಕಾಂಗ್ರೆಸ್ ಜನರಿಗೆ ಮತ್ತು ಕಾಂಗ್ರೆಸ್ಸಿಗೆ ನಮಸ್ಕಾರ ಮಾಡುವವರಿಗೆ ಅಲ್ಲಿ ಸ್ಥಾನ ಇದೆಯೇ ವಿನಾ ವಿರೋಧಪಕ್ಷದವರು ಆ ಬೋರ್ಡಿನಲ್ಲಿ ಸದಸ್ಯರು ಆಗುವುದಕ್ಕೆ ಅವಕಾಶವಿಲ್ಲ. ಎಲ್ಲೆಲ್ಲಿ ಓಪನ್ ಸ್ಪೇಸ್ ಇರಬೇಕು, ಎಲ್ಲೆಲ್ಲಿ ಅನ್ನತ್ತ ಇರಬೇಕು, ಚರ್ಚು, ದೇವಸ್ಥಾನ ಇರಬೇಕು, ಮಸೀದಿ ಇರಬೇಕು ಅವೊಂದಕ್ಕೂ ಲೇಔಟಿನಲ್ಲಿ ಅವಕಾಶಮಾಡಿಕೊಟ್ಟಿರುವುದಿಲ್ಲ. ಎಲ್ಲಾ ಜಾಗವನ್ನೂ ಮಾರಾಟ ಮಾಡಿಬಿಡುತ್ತಿದ್ದಾರೆ. ಈಗ ನಿವೇಶನದ ಬೆಲೆಯಾತಕ್ಕೆ ಜಾಸ್ತಿ ಆಗಿದೆ ಎಂದರೆ ಎಷ್ಟು ಜನರು ಚುನಾಯಿತರಾಗಿ ಬಂದು ಮಂತ್ರಿಗಳಾಗಿ ರಿಟೈರ್ ಆಗಿದ್ದಾರೋ, ಅವರೆಲ್ಲರಿಗೂ ಒಂದೊಂದು ಮನೆ ಇದೆ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಬೆಂಗಳೂರು ಟ್ರಸ್ಟ್ ಬೋರ್ಡು ಸಲುವಾಗಿ ಮಾತನಾಡುತ್ತಿದ್ದಾರೆಯೋ, ಮೈಸೂರು ಟ್ರಸ್ಟ್ ಬೋರ್ಡ್ ಸಲುವಾಗಿ ಮಾತನಾಡುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಅಜೀಜ್ ಸೇಟ್.—ಮಂತ್ರಿಗಳ ಲೇ ಔಟ್ ಎಂದರೆ ಮಂತ್ರಿಗಳು ಸ್ವರ್ಗದಲ್ಲಿ ಇದ್ದಹಾಗೆ ಇರುತ್ತಾರೆ. ಹೊಸದಾಗಿ ಮಂತ್ರಿಗಳಾದರೆ, ಅವರಿಗೆಲ್ಲಾ ಒಂಜೊಂದು ಹೊಸ ಸೈಟ್ ಕೊಡುತ್ತಾರೆ. ಯಾವುದೇ ಮಂತ್ರಿಗಳಿಗೆ ಇರುವ ಸೌಕರ್ಯ ನಮ್ಮ ದೇಶದಲ್ಲಿ ಬೇರೆ ಯಾವ ಜನರಿಗೂ ಇಲ್ಲ. ಇವೊತ್ತು ಬೆಂಗಳೂರಿನಲ್ಲಿ ಜನರಿಗೆ ನರಿಯಾದ ರಕ್ಷಣೆ ಸಿಗುತ್ತಾ ಇಲ್ಲ. ಬೆಂಗಳೂರು ಉತ್ತರದಿಂದ ದಕ್ಷಿಣಕ್ಕೆ ಮತ್ತು ಪೂರ್ವದಿಂದ ಪಶ್ಚಿಮಕ್ಕೆ ಬೆಳೆಯುತ್ತಾ ಇದೆ. It is high time that this sort of growth is checked. ಬೆಂಗಳೂರು ಮೇಲಕ್ಕೆ ಬೆಳೆಯಬೇಕೇ ವಿನಾ ಹೊಸದಾಗಿ ನಿವೇಶನಗಳನ್ನು ಮಾಡುವುದನ್ನು ಕಡಿಮೆ ಮಾಡಬೇಕು. ಬೆಂಗಳೂರು ಲೆಂಗ್ತ್‌ವೈಸ್ ಮತ್ತು ಬ್ರೆಡ್ತ್‌ವೈಸ್ ಬೆಳೆಯುವುದು ಕಡಿಮೆಯಾಗಬೇಕು. ಈ ಬೋರ್ಡಿನವರು ಮಾಡಿರುವ ಬಡಾ

(ಶ್ರೀ ಅಜೀಜ್ ಸೇಟ್)

ವಣಿಗಳಿಗೆ, ಟಾರ್ ರಸ್ತೆಗಳಿರುವುದಿಲ್ಲ, ಬೀದಿ ದೀಪಗಳಿರುವುದಿಲ್ಲ. ನೀರು ಕೊಳಾಯಿಗಳನ್ನು ಹಾಕಿರುವುದಿಲ್ಲ. ಇವರು ಮಾಡುವ ಅನ್ಯಾಯಕ್ಕೆಲ್ಲಾ ಕಾರ್ಪೊರೇಷನ್‌ನಿನವರು ಹೊಣೆಗಾರರಾಗಬೇಕು. ಮತ್ತು ಅದಕ್ಕೆ ಬೇಕಾದ ಹಣ ಜನರು ಕೊಡಬೇಕಾಗಿದೆ. ಎಷ್ಟೋ ಮನೆಗಳಿಗೆ ನಂಬರ್ ಕೊಟ್ಟಿಲ್ಲ, ಕಂದಾಯ ಹಾಕಿಲ್ಲ. ಈಪೊತ್ತು ಬೆಂಗಳೂರಿನಲ್ಲಿ ಬಡವರು ಮತ್ತು ನರಕಾರಿ ಬಡ ನೌಕರರು ವಾಸಮಾಡುವಹಾಗಿಲ್ಲ. ಕೂಲಿಗಾರರು ಮತ್ತು ಬಡವರು ಸಿಟಿಯಿಂದ ದೂರ ಹೋಗಿ ಗುಡಿಸಲು ಹಾಕಿಕೊಂಡು ಇರಬೇಕಾಗಿದೆ. 30 ರೂಪಾಯಿ ಕೊಟ್ಟು ಮನೆ ಬಾಡಿಗೆಗೆ ತೆಗೆದುಕೊಳ್ಳುವ ಶಕ್ತಿಯೂ ಇಲ್ಲ, ಮತ್ತು ಅಷ್ಟು ಕಡಿಮೆ ಬಾಡಿಗೆಯ ಮನೆಗಳೂ ಸಿಕ್ಕುವುದಿಲ್ಲ. ನಾಲ್ಕನೇ ದರ್ಜೆಯ ನೌಕರರು ಆರು ಮೈಲಿ ದೂರದಿಂದ ನಡೆದುಕೊಂಡು ಬರಬೇಕು. ಈ ರೀತಿ ಬೆಂಗಳೂರಿನಲ್ಲಿ ಪರಿಸ್ಥಿತಿ ಹದಗೆಡುತ್ತಾ ಇದೆ. ಈ ಟ್ರಸ್ಟ್ ಬೋರ್ಡುಗಳಲ್ಲಿ ಸದಸ್ಯರಾಗಲು ಎಲ್ಲರಿಗೂ ಅವಕಾಶ ಇರಬೇಕು. ಲೇಔಟ್ ಮಾಡುವಾಗ ಎಲ್ಲಾ ವಿಧವಾದ ಸೌಕರ್ಯಗಳನ್ನೂ ಒದಗಿಸಿ ಆ ಪೇಲೆ ಕಾರ್ಪೊರೇಷನ್ನಿಗೆ ಹ್ಯಾಂಡ್ ಓವರ್ ಮಾಡಬೇಕು. ಬೆಂಗಳೂರನ್ನು ಸ್ಕೈಸ್ಕೈಸ್ ಬೆಳೆಯಲು ಅವಕಾಶಕೊಡಬೇಕೇ ವಿನಾ ಈ ಲೆಂಗ್ತ್‌ವೈಸ್ ಅಥವಾ ಬ್ರೆಡ್ತ್‌ವೈಸ್ ಬೆಳೆಯಲು ಅವಕಾಶ ಕೊಡಬಾರದು. ಪೋಲೀಸ್ ಔಟ್‌ಪೋಸ್ಟ್‌ಗಳನ್ನು ಹೆಚ್ಚು ಮಾಡಿ ಜನರಿಗೆ ರಕ್ಷಣೆ ಕೊಡಬೇಕು. ಪೊನ್ನೆ ಮಿರ್ ಕಾಲೋನಿಯಲ್ಲಿ ಗುಡಿಸಲುಗಳನ್ನು ಸುಟ್ಟುಹಾಕಿದ್ದಾರೆ, ಮಾವಳ್ಳಿಯಲ್ಲಿ ಒಬ್ಬ ಕಾಕಾ ಅಂಗಡಿಯ ಬೋರ್ಡ್ ಎತ್ತಿದ್ದಾರೆ. ಕಲ್ಲು ಹೊಡೆದಿದ್ದಾರೆ, ಇದು ಚಳುವಳಿ ಮಾಡುವ ರೀತಿಯೇ ? ಜನರಿಗೆ ಸೆಕ್ಯೂರಿಟಿ ಇಲ್ಲ. ಸೇಫ್ಟಿ ಇಲ್ಲ ತಮ್ಮ ಮನೆಗಳಿಗೆ ಅದರೆ ರಿವರ್ಸ್ ಪೋಲೀಸು ಎಲ್ಲಾ ಬರುತ್ತದೆ, ನನ್ನಂಥ ಬಡವನು ಇರುವ ಕಡೆಗೆ ಯಾರೂ ಬರುವುದಿಲ್ಲ. ತಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳವರಾದ್ದರಿಂದ ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಸಭಾಪತಿಗಳೇ, ತಾವು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ನನ್ನ ವಂದನೆ. ಈಗ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಅಮೆಂಡ್‌ಮೆಂಟ್ ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ರೀತಿ ಪ್ರತಿವರ್ಷವೂ ಕೂಡ ಒಂದೊಂದು ಅಮೆಂಡ್‌ಮೆಂಟ್ ಬಿಲ್ಲುಗಳು ಬರುತ್ತಲೇ ಇರುತ್ತವೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡು ಮತ್ತು ಕಾರ್ಪೊರೇಷನ್‌ಗೆ ಒಂದು ಸಮಗ್ರವಾದಂತಹ ಬಿಲ್ಲನ್ನು ತರಬೇಕೆಂದು ಹೇಳಿ ಅನೇಕ ತಿಂಗಳುಗಳಾದರೂ ಕೂಡ ಅದು ಹಾಗೆಯೇ ಇದ್ದು ಈ ರೀತಿ ಚಿಲ್ಲರೆ ಚಿಲ್ಲರೆಯಾಗಿ ತಿದ್ದುಪಡಿ ಬಿಲ್ಲುಗಳನ್ನು ತರುತ್ತಾ ಇರುವುದು ಅಷ್ಟು ಸೂಕ್ತವಾದುದಲ್ಲ. ಜಯನಗರ, ರಾಜಾಜಿನಗರ, ಸದಾಶಿವನಗರ ಇವುಗಳನ್ನು ಬಿಟ್ಟರೆ ಈ ಟ್ರಸ್ಟ್‌ಬೋರ್ಡ್ ಯಾವ ವಿಧವಾದ ಒಂದು ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿಲ್ಲ. ಊರೆರಿಯಾ ಸೂರೆ ಆದ ಮೇಲೆ ಊರು ಬಾಗಿಲು ಹಾಕಿದರು ಅಂತ ಅನ್ನುವ ಹಾಗೆ ಬೆಂಗಳೂರು ನಗರ ಅಕ್ರಮವಾಗಿ ಬೆಳೆಯುವುದಕ್ಕೆ ಅವಕಾಶ ಕೊಟ್ಟು ಈಗ ಅನೇಕ ತರಹದ ಮಾರ್ಪಾಡುಗಳನ್ನು ಮಾಡಬೇಕೆಂದು ಪ್ರಯತ್ನ ಪಡುತ್ತಾ ಇದ್ದೀರಿ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಪ್ರಾರಂಭವಾದಾಗಲೇ ಇಂತಹ ಲೋನ್ ರೈಸ್ ಮಾಡಿ ಬೆಂಗಳೂರು ಸುತ್ತಮುತ್ತಲಿನ ಕೆಲವು ಭಾಗವನ್ನು ತೆಗೆದುಕೊಂಡು ಸೈಟುಗಳನ್ನು ಮಾಡಿ ಬಡವರಿಗೆ ಕೊಟ್ಟಿದ್ದರೆ ಕಷ್ಟದಲ್ಲಿ ಈ ರೀತಿ ಅಕ್ರಮವಾದ ನೂರಾರು ರೆವಿನ್ಯೂ ಪಾಕೆಟ್ಸ್ ಆಗುತ್ತಾ ಇರಲಿಲ್ಲ. ಟ್ರಸ್ಟ್‌ಬೋರ್ಡಿನವರು ನೈಷ್ಟಿಮಾಡಿರತಕ್ಕ ಮನೆಗಳು ಮತ್ತು ಸೈಟುಗಳಿಗಿಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅನಧಿಕೃತವಾಗಿರತಕ್ಕ ಲೇ ಔಟುಗಳು ನಿರ್ಮಾಣವಾಗಿ ಅಲ್ಲಿರತಕ್ಕ ಮನೆಗಳು ಜೂಜಿನ ಕಟ್ಟೆಗಳು, ಕಳ್ಳಭಟ್ಟಿ ತಯಾರು ಮಾಡತಕ್ಕ ಕೇಂದ್ರಗಳು ಹಾಗೂ ಸೂಳೆಗಾರಿಕೆ ನಡೆಸತಕ್ಕ ಜಾಗಗಳಾಗಿವೆ. ಟ್ರಸ್ಟ್‌ಬೋರ್ಡಿನವರು ಬೆಂಗಳೂರು ನಗರದಲ್ಲಿರತಕ್ಕ 110 ವಾರ್ಡುಗಳನ್ನು ಕ್ಲಿಯರ್ ಮಾಡಲಿಕ್ಕೆ ನಿಜವಾಗಿಯೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಅದರ ಜೊತೆಗೆ ನೂರಾರು ಇಂತಹ ರೆವಿನ್ಯೂ ಲೇ ಔಟ್‌ಗಳು ನಿರ್ಮಾಣವಾಗಿವೆ. ಅಲ್ಲಿ ನೀರಿನ ಸೌಕರ್ಯ ಇಲ್ಲ. ಇದರ ಜೊತೆಗೆ ಅನ್‌ಅಂಥರೈಸ್ಡ್ ರೆವಿನ್ಯೂ ಲ್ಯಾಂಡ್‌ನಲ್ಲಿ ಕಟ್ಟಿರತಕ್ಕ ಮನೆಗಳಲ್ಲಿ ವಾಸಮಾಡತಕ್ಕವರನ್ನು ಓಟರುಗಳ ಲಿಸ್ಟ್‌ನಲ್ಲಿ ಸೇರಿಸಿದ್ದಾರೆ. ನಮಗೆ ಬಂದಿರತಕ್ಕ ಕಷ್ಟ ಅವರಿಂದ ಓಟು ಪಡೆದುಕೊಂಡು ಬಂದು ಅವರಿಗೆ ಏನೂ ಕೂಡ ಅನುಕೂಲ ಮಾಡಿಕೊಡುವುದಕ್ಕೆ ಶಕ್ತಿ ಇಲ್ಲದಂತಾಗಿದೆ. ಟ್ರಸ್ಟ್‌ಬೋರ್ಡಿನವರು ತಾವು ತೆಗೆದುಕೊಂಡ ಜಾಗವನ್ನು ತಕ್ಷಣ ಕಾರ್ಪೊರೇಷನ್‌ಗೆ ಪಹಿಸಿಕೊಟ್ಟಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಈಗ ರಾಜಾಜಿನಗರ ಮತ್ತು ಜಯನಗರಕ್ಕಾಗಿ 15 ಲಕ್ಷ ರೂಪಾಯಿಗಳನ್ನು ಪೆಚ್ಚ ಮಾಡಿ ಕಾರ್ಪೊರೆಷನ್ನಿನ ಪಹಿಸಿಕೊಟ್ಟರು ಕಾರ್ಪೊರೇಷನ್‌ನವರು ಸುಮಾರು ಒಂದೂವರೆಕೋಟಿ ರೂಪಾಯಿಗಳನ್ನು ಪೆಚ್ಚ

ಮಾಡಿದ್ದಾರೆ ಆದರೂ ಕೂಡ ಅವು ಸರಿಯಾದ ಸ್ಥಿತಿಗೆ ಬಂದಿಲ್ಲ. ಮೊನ್ನೆ ಎ ಐ ಸಿ ಸಿ ವಿಾಟಿಂಗ್ ಆದಾಗ ಡೆಲಿಗೇಟ್ಸ್‌ಗೆ ಜಾಗ ಪ್ರೊವೈಡ್ ಮಾಡಿಕೊಡಬೇಕಾಯಿತು, ಜಯನಗರದ ಅನೇಕ ರಸ್ತೆಗಳನ್ನು ಬೇಕಾದ ಹಾಗೆ ದುಡ್ಡು ಖರ್ಚ ಮಾಡಿ ಟಾರ್ ಮಾಡಿದರು. ಅದೇ ರೀತಿ ಬಡವರು ಇರುವ ಕಡೆ ಅನುಕೂಲ ಮಾಡಿಕೊಡಿ ಎಂದರೆ ಹೆಚ್ಚು ಗಮನ ಕೊಡುವುದಿಲ್ಲ. ಅದೇ ರೀತಿ ಸೈಟುಗಳನ್ನು ಕೊಡುವಾಗಲೂ ಕೂಡ ದುಡ್ಡು ಇರಬೇಕು ಇಲ್ಲದೇ ಇದ್ದರೆ ಇನ್‌ಫ್ಲೂಯನ್ಸ್ ಇರಬೇಕು ಅರ್ಥವನ್ನಿಗೆ ಕೊಡತಕ್ಕ ಕ್ರಮ ಹಿಂದಿನಿಂದ ನಡೆದುಕೊಂಡು ಬಂದಿದೆ. ಲೇ ಔಟ್ ಚಾರ್ಜಸ್ ನಿಗದಿ ಮಾಡುವಾಗ ನಗರದ ಬೆಳವಣಿಗೆಗೆ ಬೇಕಾದ ನೀರು ಮತ್ತು ಒಳಚರಂಡಿ ವ್ಯವಸ್ಥೆಗೆ ಬೇಕಾದ ದುಡ್ಡನ್ನೂ ಸೇರಿಸಿ ನಿಗದಿ ಮಾಡಿದ್ದ ಪಕ್ಷದಲ್ಲಿ ವಾಟರ್ ನಪ್ಲೈಗಾಗಲಿ, ಡ್ರೈನೇಜ್‌ಗಾಗಲಿ ಕಷ್ಟವಾಗುತ್ತಾ ಇರಲಿಲ್ಲ. ಮೊದಲೇ ಸರಿಯಾದಂತಹ ಒಂದು ಮಾಸ್ಟರ್ ಪ್ಲಾನ್ ಹಾಕಿಕೊಳ್ಳದೆ, ಕ್ರಮವಾದ ಒಂದು ಶಿಸ್ತಿನ ತೀರ್ಮಾನವನ್ನು ತೆಗೆದುಕೊಳ್ಳದೆ ಇಂತಹ ಬಿಲ್ಲುಗಳನ್ನು ಆಗಿಂದಾಗ್ಗೆ ತರುತ್ತಾ ಇರುವುದು ಬಹಳ ಶೋಚನೀಯವಾದ ವಿಚಾರ. ಇನ್ನಾದರೂ ಸಹ ಇದು ಸರಿಯಾದ ಒಂದು ಇಂಪ್ರೂವ್‌ಮೆಂಟ್ ಆಗತಕ್ಕ ಸಂಸ್ಥೆಯಾಗಲಿ ಎಂದು ಹಾರೈಸುತ್ತೇನೆ. ನಾನು ಈ ಮಸೂದೆಗೆ ಒಂದು ತಿದ್ದುಪಡಿಯನ್ನು ಕೊಟ್ಟಿದ್ದೇನೆ. ಅದು ಈ ರೀತಿ ಇದೆ.—

To the clause 2, add a new clause as 29B (1).—

"While utilising the borrowed funds for the projects undertaken by the Board, out of the borrowed funds, in the estimate to be prepared the quantum of interest payable to the loan borrowed in respect of that project should be added."

"(2) The amount of the borrowed loan should be utilised for productive and development projects only."

ಈ ಎರಡು ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆ ಎಂದು ಹೇಳಿ ತಿಳಿದುಕೊಂಡಿದ್ದೇನೆ. ಈಗ ನಮ್ಮ ದೇಶದಲ್ಲಿ ಬಂಡವಾಳಕ್ಕೆ ದೊಡ್ಡ ಅಡಚಣೆ ಏನೆಂದರೆ ಯಾರಿಗೆ ಸೌಕರ್ಯ ಬೇಕೂ ಅದನ್ನು ಒದಗಿಸಿಕೊಡುವುದಿಲ್ಲ. ಕೆಲವು ದಿನಗಳ ಹಿಂದೆ ಕಾನ್‌ಪುರಕ್ಕೆ ಹೋಗಿದ್ದೆ ಅಲ್ಲಿ ಯಾವುದಾದರೂ ಒಂದು ಸ್ಕೀಂ ತೆಗೆದುಕೊಂಡರೆ ಅದನ್ನು ನಿಗದಿಯಾದಂತಹ ಕಾಲದಲ್ಲಿ ಕ್ರಮವಹಿಸುವುದಕ್ಕೆ ಪ್ರಯತ್ನಪಡುತ್ತಾರೆ. ಈಗ ನಮ್ಮ ಏರಿಯಾದಲ್ಲಿ ಅಶೋಕ ನಗರ ಮತ್ತು ಹನುಮಂತನಗರ ಇದೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಸುಮಾರು ಆಗಲೇ ಹತ್ತು ವರ್ಷವಾಯಿತು, ಇದುವರೆಗೂ ಕೂಡ ಯಾವ ಇಂಪ್ರೂವ್‌ಮೆಂಟೂ ಮಾಡುತ್ತಿಲ್ಲ. ಕಾರ್ಪೊರೇಷನ್‌ನವರು ನಮಗೆ ಸಂಬಂಧವಿಲ್ಲ ಎಂದು ಹೇಳುತ್ತಾರೆ. ರಸ್ತೆ, ಚರಂಡಿ ಎಲ್ಲಾ ಕೆಟ್ಟುಹೋಗುತ್ತಾ ಇವೆ. ನಾಳೆ ಅದನ್ನು ಕಾರ್ಪೊರೇಷನ್‌ನವರು ತೆಗೆದುಕೊಂಡರೆ ಒಂದಕ್ಕೆ ನಾಲ್ಕರಷ್ಟು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಟ್ರಸ್ಟ್‌ಬೋರ್ಡಿನವರು ಒಂದು ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡಿದ ತಕ್ಷಣ ಕಾರ್ಪೊರೇಷನ್‌ಗೆ ವಹಿಸಿಕೊಡತಕ್ಕ ಕ್ರಮ ಇಟ್ಟುಕೊಳ್ಳಬೇಕಾಗುತ್ತದೆ, ಅದರ ಜೊತೆಗೆ ಸೈಟುಗಳನ್ನು ಅಲಾಟ್ ಮಾಡುವ ಸಂಧರ್ಭದಲ್ಲಿ ಅನೇಕ ಮನೆಗಳು ಇದ್ದಂಥವರಿಗೆ ಕೊಡತಕ್ಕ ಒಂದು ಪದ್ಧತಿಯನ್ನು ಆದಷ್ಟು ಕಡಿಮೆ ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್, ಕಾರ್ಪೊರೇಷನ್ ಮತ್ತು ಟೌನ್ ಪ್ಲಾನಿಂಗ್ ಅಥಾರಿಟಿ ಇವುಗಳು ಕೋ ಆರ್ಡಿನೇಷನ್ ಇಟ್ಟುಕೊಂಡು ಕೆಲಸ ಮಾಡಬೇಕೆಂದು ಇದ್ದರೂ ಕೂಡ ಅದು ಸರಿಯಾಗಿ ಆಗುತ್ತಿಲ್ಲ. ಈ ಕಡೆ ಕಾರ್ಪೊರೇಷನ್ ರಸ್ತೆ ರಿಪೇರಿ ಮಾಡುತ್ತ ಬಂದರೆ, ಆ ಕಡೆ ವಾಟರ್ ನಪ್ಲೈ ಬೋರ್ಡಿನವರು ರಸ್ತೆಗಳನ್ನು ಡ್ಯಾಮೇಜ್ ಮಾಡುತ್ತಾರೆ. ಇವರಲ್ಲಿ ಕೋ ಆರ್ಡಿನೇಷನ್ ಸರಿಯಾಗಿಲ್ಲ ಎಂದು ವಿಷಾದದಿಂದ ತಿಳಿಸುತ್ತೇನೆ. ಈಗ ಅಧ್ಯಕ್ಷರು ಅವಸರವಾಗಿದ್ದಾರೆ. ತಿದ್ದುಪಡಿಗಳು ಬಂದಾಗ ಸ್ವಲ್ಪ ವಿಸ್ತರವಾಗಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

Srl M. A. AMALORPAVAM — the City of Bangalore Improvement

1970.

53

L.A.

(SRI M. A. AMALORPAYAM,

All of us realise that unless the City Improvement Trust Board has adequate funds at its disposal, it will not be possible to meet the growing demands of the City. But I am afraid whether the loans that are proposed to be raised would be utilised properly for ameliorating the conditions of the people who are not rich. Some times I feel like being an Alice in Wonderland when I find our Officers are extraordinarily strict in adhering to rules and regulations when it is a question of doing something to a poor man and a man who has no influnce or position. But persons in affluent circumstance get things done in a jiffy as if thorugh the assistance of a magic wand. Those who are not in affluent circumstances will have to go to the Trust Board hundred times and work up to get an ordinary thing done. If he is a person without influence or position, even to get the possession certificate, he has to spend nothing less than Rs. 50 or Rs. 100 or even Rs. 200. Even irregular things are so quickly regularised if that person happens to be a wealthy person or a person who is a favourite of those who are occupying high positions. I really cannot understand how these officers who are scrupulously following rules and regulations when the requests are made by the common man and the poor, are able to see that even irregular things are regularised, when it is a rich and influential man.

We also cannot understand how the Government could be complacent when so many representations are made to them regarding the irregularities that are committed under the very nose of the officers. Contractors with the connivance of the officers are doing very bad work and are actually swallowing the funds of the public by very, very bad performance. Even if it is brought to the notice of the Government, Government has not bothered to take notice of it. On the other hand, they seem to think that we have no better business than keep complaining about these things. We say we are socialising the country and we want to practice democratic socialism. Unfortunately it is nothing but aristocratic socialism which we are practising. We are not at all insterested in wiping the tears of the poor man.

As my esteemed friend Mr. Nanjappa already pointed out, the City Improvement Trust Board is meant only for those who are rich and who can afford to buy lands and build houses. It has become a very thriving thing to swear by the common man and the poor man. We say we want to ameliorate the conditions of the poor but actually we are doing everything to make the rich man happier and more comfortable. We are actually throwing into the gutters the poor man for whom we are swearing from the houseteps. Therefore, it is quite all right to raise funds; let us raise loans. But unless we try to see that the Harijans ~~improvement Trust~~ and the landless people are helped ~~L. I. C.~~ and debentures. Let us see Board ~~the~~ ~~ing this Amendment Bill~~

whether we have tried to improve the lot of Harijans and the Scheduled Castes. Where do we allot sites for these poor people ? Palace Orchard and such other nice places are all reserved for men who are born with a silver spoon in their mouth and those who have acquired wealth in so many other ways. But we acquire land in the outskirts of Bangalore and we allot sites to Harijans and poor people there. Even after allotting sites to them, we never provide them with the basic amenities like water or light or roads. But if it is a rich locality like Jayanagar, you provide them in no time. I am not against rich men ; I am not averse to rich men living comfortably. But I am against those who talk much about the poor man and socialism in a patronising manner. Our Government is unfortunately not trying to translate into action what they are professing. Let us not talk about the poor man. But actually what is it that we are doing to improve his lot ? We are trying to raise the standard of the rich man who is already enjoying all the comforts of life. We are not at all earnestly making any effort for improving the poor man. It is advantageous to always speak of the poor man because it helps to get a good name in the public. When we are talking about the poor man, we are never sincere to make efforts to improve the lot of the common man. I would like to impress upon our Hon. Minister of State for Municipal Administration this point : let us try to make people believe that we are really socialistic. Unless we try to ameliorate the conditions of the teeming millions by providing house sites and other basic amenities like water, light, road etc; to the common man, there is no point in trying to bring a Bill seeking the approval of the House in order to a se loans. To whom are you going to utilise these borrowed loans ? The Government should utilise the loans for execution of schemes beneficial to the poor and the common man and set right the present state of affairs. Though we give our support to this Amending Bill, we are a little afraid whether the loans that are going to be raised will be utilised properly. The Ministers and the officers have a duty by this community. I hope that the Hon. Minister for Municipal Administration and the Government would certainly spend the money that is proposed to be raised through loans in order to see that the common man's interest is looked after and the most vital necessity like water is provided. Here is the rich man who has taps for his gardens, and all that. But for hundreds of huts not a single tap is provided. There is no meaning in the Administrator and the Minister giving the stock replies ; "We will look into the matter, we will think about it, we sympathise with them." We do not bother about their symathy. We want brass tacks. Let them provide taps to the common man and roads to the common man. Let them not talk about socialism and their solicitude for the poor man, ultimately ignoring the interests of the Harijans and the poor people.

With these few words, I earnestly appeal to the Government and the Hon. Minister to see that the funds raised are utilised properly in the interest of the people.

Sri M. S. KRISHNAN.—He spoke against everything in the Bill, How can we say he has supported the Bill ?

†ಶ್ರೀ ಬಿ. ಎಂ. ಪಾಟೀಲ್.—ಸನ್‌ಮಾನ್ಯ ಸಭಾಪತಿಗಳೇ, ಮಾನ್ಯ ಮಿತ್ರರನೇಕರು ಈ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುತ್ತಾ ಅನೇಕ ಸಲಹೆಗಳನ್ನು ಸೂಚನೆಗಳನ್ನು ಮಾಡಿದ್ದಾರೆ, ಅನೇಕ ವಾದಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಸನ್‌ಮಾನ್ಯ ಮಿತ್ರರಾದ ಶ್ರೀಮಾನ್ ನಾಗಪ್ಪನವರು ಈ ತಿದ್ದುಪಡಿ ಮಸೂದೆಯಲ್ಲಿ ಸರ್ಕಾರದ ಒಪ್ಪಿಗೆಯಾದ ಮೇಲೆ ಟ್ರಸ್ಟ್ ಬೋರ್ಡಿನವರು ಸಾಲ ಎತ್ತಬೇಕೆಂಬ ಅಂಶ ಏನಿದೆ ಅದು ಬದಲಾವಣೆಯಾಗಬೇಕು, ಲೆಜಿಸ್‌ಲೇಚರ್ ಮುಂದೆ ಬಂದು ಆಮೇಲೆ ಆದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿದರು. ನಾನು ಈಗಾಗಲೇ ಹೇಳಿದ್ದೇನೆ. ಯಾವುದಾದರೂ ಒಂದು ಟ್ರಸ್ಟ್‌ಬೋರ್ಡ್ ಯಾವ ಉದ್ದೇಶಕ್ಕೆ ಮಾಡಿದ್ದೇವೆಯೋ ಅದು ನೆರವೇರಬೇಕಾದರೆ ಆ ಟ್ರಸ್ಟ್‌ಬೋರ್ಡಿಗೆ ಸಾಕಾದಷ್ಟು ಹಣ ಬೇಕಾಗುತ್ತದೆ. ಈಗ ಹಣದ ಅಭಾವ, ನಂಪನ್ಮೂಲಗಳು ವಿರಳ. ಆದ್ದರಿಂದ ಸಾಕಾದಷ್ಟು ತೀವ್ರಗತಿಯಿಂದ ಟ್ರಸ್ಟ್‌ಬೋರ್ಡಿನವರು ಕೈಗೆ ತಗೆದುಕೊಂಡ ಯೋಜನೆಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಹಣ ಒದಗಬೇಕಾದರೆ ಟ್ರಸ್ಟ್‌ಬೋರ್ಡಿನವರಿಗೇ ಅಧಿಕಾರ ಕೊಡುತ್ತಿಲ್ಲ, ಸರ್ಕಾರದ ಒಂದು ಅನುಮತಿಯನ್ನು ಪಡೆದು ಅವರು ಬೇರೆ ಬೇರೆ ಆರ್ಥಿಕ ಸಂಸ್ಥೆಗಳಿಂದ ಹಣ ಎತ್ತಬೇಕಾಗುತ್ತದೆ. ಮಾನ್ಯ ಮಿತ್ರರು ಮಾತನಾಡುತ್ತಾ ಟ್ರಸ್ಟ್‌ಬೋರ್ಡಿನಲ್ಲಿ ಏನು ನಿವೇಶನಗಳನ್ನು ಕೊಡುತ್ತಾ ಇದೆ ಅದು ಕೇವಲ ಸಿರಿವಂತರಿಗೆ ಸಿಕ್ಕುತ್ತದೆ, ಮಧ್ಯಮ ವರ್ಗದವರಿಗೆ, ಬಡವರಿಗೆ ಸಿಕ್ಕುತ್ತಿಲ್ಲ ಎಂದು ಹೇಳಿದರು. ನಿವೇಶನಗಳನ್ನು ಕೊಡುವಾಗ ಟ್ರಸ್ಟ್‌ಬೋರ್ಡು ಒಂದು ತರಹದ ನಿಯಮಗಳನ್ನು ಹಾಕಿಕೊಂಡಿದೆ, ಅದರಲ್ಲಿ ಕೇವಲ ಸಿರಿವಂತರಿಗೆ ಕೊಡಬೇಕು ಅಥವಾ ಬಡವರಿಗೆ ಕೊಡಬೇಕು, ಈ ಯಾವ ರೀತಿಯಿಂದ ತಾರತಮ್ಯ ಮಾಡಲಕ್ಕೆ ಆಗುವುದಿಲ್ಲ. ಯಾರ್ಯಾರು ಅರ್ಜಿ ಹಾಕಿಕೊಂಡಿದ್ದಾರೆ, ಯಾರಿಗೆ ಬೆಂಗಳೂರು ನಗರದಲ್ಲಿ ನಿವೇಶನ ಇಲ್ಲ ಅವರಿಗೆ ಕೊಡಬೇಕಾಗುತ್ತದೆ. ಮಾನ್ಯ ಮಿತ್ರರು ಇನ್ನು ಕೆಲವರು ಮಾತನಾಡುತ್ತಾ ಹರಿಜನರಿಗೆ ಸಾಕಷ್ಟು ನಿವೇಶನ ಸಿಕ್ಕುತ್ತಿಲ್ಲ ಎಂದು ಹೇಳಿದರು. ಈ ಟ್ರಸ್ಟ್‌ಬೋರ್ಡು ರೂಲ್ಸ್ ಪ್ರಕಾರ ಯಾವುದೇ ಒಂದು ಲೇ ಔಟ್ ಇದ್ದರೂ ಕೂಡ ಅದರಲ್ಲಿ 5 ಪರ್ಸೆಂಟ್ ಷೆಡ್ಯೂಲ್ಡ್ ಕ್ಯಾಸ್ಟ್ ಸಲುವಾಗಿ ಪೂಸ ಲಾಗಿಟ್ಟಿದ್ದೇವೆ. ಅದೂ ಅಲ್ಲದೇ ಅನೇಕ ಮಾನ್ಯ ಸದಸ್ಯರು ಸರ್ಕಾರವಲ್ಲಿ ಮನವಿ ಮಾಡಿಕೊಂಡ ಮೇಲೆ 5 ಪರ್ಸೆಂಟ್ ಇದ್ದುದನ್ನು ಹೆಚ್ಚು ಮಾಡಿ ಯಾವುದೇ ಬಡಾವಣೆ ಇರಲಿ 10 ಪರ್ಸೆಂಟ್ ಸ್ಕೆಟ್ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ಹರಿಜನರಿಗೆ ಕೊಡಬೇಕೆಂದು ಸರ್ಕಾರ ಈಗಾಗಲೇ ನಿರ್ಧಾರ ಮಾಡಿದೆ ಎಂದು ಹೇಳಲಿಚ್ಛಿಸುತ್ತೇನೆ.

ಮಾನ್ಯ ಸದಸ್ಯರು ಒಬ್ಬಿಬ್ಬರು ಮಾತನಾಡುತ್ತಾ ಲೇ ಔಟ್ಸ್ ಮಾಡುವ ಕಾಲಕ್ಕೆ ನೀರು ಕೊಡಬೇಕು, ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಬೇಕು, ಎಲೆಕ್ಟ್ರಿಸಿಟಿ ಕೊಡಬೇಕು, ಅಂಡರ್‌ಗ್ರೌಂಡ್ ಡ್ರೈನೇಜ್ ಮಾಡಬೇಕು ಎಂದು ಹೇಳಿದರು. ಲೇ ಔಟ್ ಮಾಡುವಾಗ ಬೆಲೆ ನಿಗದಿ ಮಾಡುವುದು ಬಹಳ ಜಾಸ್ತಿ ಅಂತ ಹೇಳುತ್ತಾರೆ. ಅದೇ ನಮಯಕ್ಕೆ ಈ ಎಲ್ಲಾ ಸೌಲಭ್ಯಗಳನ್ನೂ ಕೊಡಬೇಕೆಂದು ಹೇಳುತ್ತಾರೆ. ಈ ಎರಡೂ ಒಂದಕ್ಕೊಂದಕ್ಕೆ ವಿರೋಧವಾಗುತ್ತದೆ ಎಂದು ಹೇಳುತ್ತೇನೆ. ಎಲ್ಲಾ ಸೌಕರ್ಯಕೊಡಬೇಕೆಂದರೆ ನಿವೇಶನದ ಬೆಲೆ ಜಾಸ್ತಿಯಾಗುತ್ತದೆ. ಇನ್ನೊಂದು ಮಾತು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಏನೆಂದರೆ ಲಾಭ ಮಾಡಿಕೊಳ್ಳಲಿಕ್ಕೆ ಟ್ರಸ್ಟ್‌ಬೋರ್ಡು ಸಂಸ್ಥೆಯನ್ನು ಕಟ್ಟಿಲ್ಲ. ಸ್ಪೆಕ್ಯುಲೇಷನ್ ಮಾಡುತ್ತಾರೆ, ಭೂಮಿ ಬೆಲೆ ಜಾಸ್ತಿಯಾಗಬಾರದು, ಯೋಗ್ಯ ಬೆಲೆಗೆ ಸಿಕ್ಕಬೇಕೆಂಬ ಉದ್ದೇಶದಿಂದ ಅದನ್ನು ಮಾಡಿದೆ. ಟ್ರಸ್ಟ್‌ಬೋರ್ಡಿಗೆ ಹಾನಿಯೂ ಆಗ ಬಾರದು, ಲಾಭವೂ ಆಗಬಾರದು, ಈ ರೀತಿಯಿಂದ ಕಾರ್ಯ ಮಾಡುತ್ತಾ ಬಂದಿದ್ದೇವೆ. ಬೆಂಗಳೂರು ನಗರಕ್ಕೆ ಹೆಚ್ಚು ಹೆಚ್ಚಾಗಿ ಇಂತಹ ಬಡಾವಣೆಗಳು ತೀವ್ರ ಗತಿಯಿಂದ ಬರಬೇಕಾಗಿದೆ. ಬೆಂಗಳೂರು ನಗರ ಮೇಲಕ್ಕೆ ಹೋಗಬೇಕು ಏನು ಬಡಾವಣೆ ಮಾಡಬೇಕಾದರೂ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ಸ್ ಹಾಕಬೇಕು ಎಂದು ಹೇಳುತ್ತಾರೆ. ಇದು ಏನೇ ಮಾಡಬೇಕಾದರೂ ಸಹ ಹಣ ಇಲ್ಲದೆ ಟ್ರಸ್ಟ್‌ಬೋರ್ಡು ಯಾವ ಕೆಲಸ ಮಾಡಲಿಕ್ಕೂ ಆಗುವುದಿಲ್ಲ. ಅದಕ್ಕೆ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್, ಷೆಡ್ಯೂಲ್ಡ್ ಬ್ಯಾಂಕುಗಳು ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳಿಂದ ಹಣ ತೆಗೆದುಕೊಳ್ಳಲಿಕ್ಕೆ ಒಂದು ಅವಕಾಶ ಒದಗಿಸಿದರೆ ಈ ಎಲ್ಲ ಕಾರ್ಯಕ್ರಮಗಳನ್ನು ತೀವ್ರಗತಿಯಿಂದ ಮಾಡಬಹುದು. ಇದೇ ರೀತಿ ಸಿಂಧಿ ಮಾರವಾಡಿಗಳ ಕಡೆಯಿಂದ ಏಕೆ ಹಣ ತೆಗೆದುಕೊಳ್ಳಬಾರದು ಎಂದು ಮಾನ್ಯ ಸದಸ್ಯರು ಕೇಳಿದರು. ಆ ರೀತಿ ಯಾವ ಸಿಂಧಿ ಮಾರವಾಡಿಯಿಂದ ಹಣ ತೆಗೆದುಕೊಂಡದ್ದು ನಿದರ್ಶನ ಇದೆಯೋ ಅದು ನನಗೆ ಗೊತ್ತಿಲ್ಲ. ಏನಾದರೂ ಒಂದು ವಾದ ಮಾಡಿದರೆ ಅದು ಅರ್ಥಪೂರ್ಣವಾಗಿರಬೇಕು,

ಅರ್ಥರಹಿತವಾದ ಯಾದ ಒಪ್ಪಿಕೊಳ್ಳಲಿಕ್ಕೆ ಆಗುವುದಿಲ್ಲ. ಇನ್ನು ಅಲ್ಲಿ ಆಡಳಿತ ಬಗ್ಗೆ ಮಾಡಬೇಕೆಂದು ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ, ಅದನ್ನು ಒಪ್ಪುತ್ತೇನೆ. ಯಾವುದೇ ಆದರೂ ಒಳ್ಳೆಯದು ಕೆಟ್ಟದ್ದು ಇದ್ದೇ ಇದೆ. ಅದೇ ಪ್ರಮಾಣದಲ್ಲಿ ಅಫಿಷಿಯಲ್ಸ್ ಆಗಲಿ, ನಾನ್ ಅಫಿಷಿಯಲ್ಸ್ ಆಗಲಿ ಎಲ್ಲರೂ ಒಳ್ಳೆಯವರು, ಎಲ್ಲರೂ ಕೆಟ್ಟವರು ಇರುವುದಿಲ್ಲ. ಆಡಳಿತ ಬಗ್ಗೆಯಾಗಬೇಕು, ಸುಧಾರಣೆಯಾಗಬೇಕು ಎಂಬ ತತ್ವ ಒಪ್ಪಿಕೊಳ್ಳುತ್ತೇನೆ. ಇಷ್ಟು ಹೇಳಿ ಈ ಮಸೂದೆಗೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡುತ್ತಾರೆ ಎಂದು ಭಾವಿಸುತ್ತೇನೆ.

ಶ್ರೀ ಎ. ನಂಜಪ್ಪ.—ಅನ್ಯಾಯ ನಡೆಯುತ್ತಿಲ್ಲ ಎಂದು ಹೇಳಿದರು. ಅನ್ಯಾಯ ನಡೆಯುತ್ತಿರುವುದು ತೋರಿಸಿದರೆ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಅಂತ ಹೇಳಲಿ. ಇಲ್ಲ ಅಂತ ಆದರೆ ನಾನು ರಾಜೀನಾಮೆ ಕೊಡುತ್ತೇನೆ, ಇಲ್ಲದೇ ಹೋದಗೆ ಅವರು ಕೊಡಲಿ.

ಶ್ರೀ ಬಿ. ಎಂ. ಪಾಟೀಲ್.—ರಾಜೀನಾಮೆ ಕೊಡುವ ಪ್ರಶ್ನೆ ಇಲ್ಲಿ ಇಲ್ಲ. ಮಾನ್ಯ ಸದಸ್ಯರು ಅನ್ಯಾಯ, ಅಕ್ರಮ ನಡೆದಿದೆ ಎಂದು ಹೇಳಿ ನಿರ್ದಿಷ್ಟವಾದ ಸಂದರ್ಭಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಸೂಕ್ತವಾದ ಕ್ರಮ ತೆಗೆದುಕೊಳ್ಳಲಿಕ್ಕೆ ನಾನು ಯಾವಾಗಲೂ ಸಿದ್ಧನಾಗಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾರವಾಡಿಯಿಂದ ಲೋನ್ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು, ನಿಜ. ಪ್ರೈವೇಟ್ ಕ್ರೆಡಿಟ್ ಕಾರ್ಪೊರೇಷನ್‌ನಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೇ? ಹಾಗೆ ತೆಗೆದುಕೊಳ್ಳುವುದಾದರೆ ಅದು ಸರಿಯೇ? ನ್ಯಾಯವೇ? ಅದರ ಬಗ್ಗೆ ಹೇಳುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಸಾಲ ಎತ್ತುವಾಗ ಯಾವಾಗಲೂ ಸಂಸ್ಥೆಯ ಸಾರ್ವಜನಿಕ ಹಿತವನ್ನು ಗಮನದಲ್ಲಿಟ್ಟುಕೊಂಡು ನಿರ್ಧರಮಾಡಲಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಇದುವರೆಗೂ ನಾವೇನಾದರೂ ಹೇಳಿದರೆ ಅದು ಸರಿಯಲ್ಲ ಎಂದು ಹೇಳುತ್ತಾ ಇದ್ದರು, ಯಾರೂ ಚಾಲೆಂಜ್ ಕೊಟ್ಟಿರಲಿಲ್ಲ. ಈಗ ಶ್ರೀಮಾನ್ ನಂಜಪ್ಪನವರು ಚಾಲೆಂಜ್ ಕೊಟ್ಟಿದ್ದಾಗ ಅದನ್ನು ಒಪ್ಪಿಕೊಳ್ಳುವುದು ಒಳ್ಳೆಯದು.

ಶ್ರೀ ಬಿ. ಎಂ. ಪಾಟೀಲ್—ಈಗಾಗಲೇ ಹೇಳಿದ್ದೇನೆ, ಎಲ್ಲಾದರೂ ಅಕ್ರಮ ನಡೆದಿದೆ, ಅನ್ಯಾಯ ನಡೆದಿದೆ, ನಿಯಮಗಳನ್ನು ಬಿಟ್ಟು ಅನ್ಯಾಯವಾಗಿ ವರ್ತಿಸಿದ್ದಾರೆ ಅಂತ ಅನ್ನುವುದನ್ನು ಅವರು ಸರ್ಕಾರದ ಗಮನಕ್ಕೆ ತಂದರೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸದಾ ಸಿದ್ಧವಾಗಿದೆ.

Mr. SPEAKER.—The question is :

"That this Assembly disapproves the Ordinance No. 5 of 1969 namely, The City of Bangalore Improvement (Amendment) Ordinance, 1969, promulgated on 14th day of October 1969 by the Governor."

The resolution was negatived.

Mr. SPEAKER.—The question is :

"That the City of Bangalore Improvement (Amendment) Bill, 1970, be taken into consideration."

The motion was adopted.

CLAUES 2.

Mr. SPEAKER.—We will take the Bill clause by clause,
The question is :

"That clause 2 do stand part of the Bill"
There is an amendment

Sri M. NAGAPPA.—I move :

"That at page 2 in sub-section (1) of the proposed section 29A, line 3, for the word 'Government' the word 'Legislature' shall be substituted."

And

"That at page 2, the following proviso shall be added to sub-section (1) of the proposed section 29A ;

provided the Board shall not borrow any sum exceeding fifty crores in aggregate."

Mr. SPEAKER.—Amendment moved :

"That at page 2 in sub-section (1) of the proposed section 29A, line 3, for the word 'Government' the word 'Legislature' shall be substituted."

And

"That at page 2, the following proviso shall be added to sub-section (1) of proposed section 29A ;

Provided the Board shall not borrow any sum exceeding fifty crores in aggregeate."

†ಶ್ರೀ ಎಂ. ನಾಗಪ್ಪ.—ಈಗ ಅನೇಕ ಮಾನ್ಯ ಸದಸ್ಯರು ಈ ಬೋರ್ಡಿಗೆ ಸಾಲ ತೆಗೆದುಕೊಳ್ಳುವ ಹಣದ ಉಪಯೋಗದ ಬಗ್ಗೆ ಸಾಕಷ್ಟು ಹೇಳಿದ್ದಾರೆ. ನಾನು ಆದರ ಬಗ್ಗೆ ಹೇಳದೆ ಈಗ ಏನು ಒಂದು ತಿದ್ದುಪಡಿ ತಂದಿದ್ದಾರೋ ಅದರಲ್ಲಿ 'ಗೌರ್ನಮೆಂಟ್' ಎನ್ನುವುದನ್ನು ತೆಗೆದು, 'ಲೆಜಿಸ್ಲೇಚರ್' ಎಂದು ಹಾಕಬೇಕು ಎಂದು ಹೇಳುತ್ತೇನೆ. ಇದರ ಅವಶ್ಯಕತೆ ಬಗ್ಗೆ ಮೊದಲೇ ಹೇಳಿದ್ದೇನೆ. ಆದರೆ ಈ ಪ್ರಾವಿಸೋ ಬಗ್ಗೆ ನಾನು ಒತ್ತಾಯ ಪೂರ್ವಕವಾಗಿ ಸರ್ಕಾರವನ್ನು ಕೇಳುವುದು ನೀವು ಇದಕ್ಕೆ ಅನ್‌ಲಿಮಿಟೆಡ್ ಪವರ್ ಹಾಕತಕ್ಕದ್ದು ಸರಿಯಲ್ಲ. ಇದರಿಂದ 200-300 ಕೋಟಿ ರೂಪಾಯಿ ಆದಾಯ ಇದ್ದರೆ 500 ಕೋಟಿ ರೂಪಾಯಿ ಸಾಲ ಮಾಡಬೇಕಾಗಿ ಬರಬಹುದು. ಅದಕ್ಕಾಗಿ ಇಂತಹ ಒಂದು ಅನ್‌ಲಿಮಿಟೆಡ್ ಪವರ್ ಇಟ್ಟುಕೊಳ್ಳದೆ ತಾವು ಈಗ ಒಂದು ಪ್ರಾವಿಸೋ ತಂದಿದ್ದೀರಿ. ಎಷ್ಟು ಆಗತ್ಯತೆ ಇದೆಯೋ ಅಷ್ಟೇ ಮಾಡಬೇಕಾಗಿತ್ತು. ಅಂತಹ ಒಂದು ಪ್ರಾವಿಸೋ ತರಬೇಕಾಗಿತ್ತು. ಈಗ ತಂದಿರುವುದನ್ನು ಈ ಮಾನ್ಯ ಸಭೆ ಒಪ್ಪುತ್ತದೆಯೇ ಎಂದು ಗಮನಿಸಬೇಕು. ಏತಕ್ಕೆಂದರೆ ಇದರಲ್ಲಿ ಮುಖ್ಯವಾಗಿ ಸರ್ಕಾರ ಇಡಕ್ಕೆ ಪೂರಿಟಿ ಕೊಡಬೇಕಾದ ಪ್ರಶ್ನೆಯನ್ನು ಗಮನಿಸಬೇಕು. ನಾವು ಮಾಡುವ ಸಾಲ, ಇವೆಲ್ಲಾ ವಿಷಯಗಳನ್ನು ಪರಿಗಣಿಸಬೇಕು. ಈ ದೃಷ್ಟಿಯಿಂದ ನೀವು ಅನ್‌ಲಿಮಿಟೆಡ್ ಪವರ್ಸ್ ಕೊಟ್ಟಿರುವುದರಿಂದ ಬೋರ್ಡ್‌ನವರು ಬೇಕಾದಷ್ಟು ಸಾಲ ಮಾಡಬಹುದು. ಈ ಲಿಜಿಸ್ಲೇಚರ್‌ಗೆ ಇದ್ದಂಥ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಳ್ಳುವುದು ಸರಿಯಲ್ಲ. ರೂಲು ಪ್ರಕಾರ ಏನು ಇದೆ ಎನ್ನುವುದನ್ನು ಕೃಷ್ಣನ್‌ರವರು ಹೇಳಿದರು. ಅರೀತಿ ಪ್ರೈವೇಟ್ ಬ್ಯಾಂಕುಗಳಲ್ಲೂ ಕೂಡ ಸಾಲ ಮಾಡುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಸೆಕ್ಷನ್ 29 ಎ ಸಬ್‌ಕ್ಲಾಸ್ (2)ನ್ನು ನೋಡಿದರೆ ಅದರಲ್ಲಿ ಈರೀತಿ ಇದೆ. The rules made by the Government for the purpose of this section may empower the Board to borrow by the issue of debentures and make arrangements with bankers. ಈ ಬ್ಯಾಂಕಿನ ಡೆಫೆನೆಷನ್ ತೆಗೆದುಕೊಂಡರೆ ಇಂತಹ ಬ್ಯಾಂಕ್‌ನಲ್ಲಿ ವ್ಯವಹಾರ ಮಾಡಬೇಕು ಎಂದು ಸ್ಪಷ್ಟಪಡಿಸಿಲ್ಲ. ಈ ಸಭೆಗೆ ಇರುವ ಅಧಿಕಾರವನ್ನು ಸಂಪೂರ್ಣವಾಗಿ ಸರ್ಕಾರದವರೇ ವಹಿಸಿಕೊಂಡಿದ್ದಾರೆ. ಆದುದರಿಂದ ಈ ಅಧಿಕಾರವನ್ನು ಸಂಪೂರ್ಣವಾಗಿ ಈ ಸಭೆಗೆ ವಹಿಸಿಕೊಡಬೇಕು. ಆ ತರಹ ಮಾಡದೇ ಇದ್ದರೆ ಕಾನೂನಿಗೆ ವಿರೋಧವಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಈಗ ಏನು ಒಂದು ಬಿಲ್ಲು ತಂದಿದ್ದಾರೊ ಅದು ಕನಿಷ್ಟಪಕ್ಷ 50 ಕೋಟಿಗಿಂತ ಹೆಚ್ಚಾಗಿರಬಾರದೆಂದು ಹೇಳಿ ಅದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

Sri T. R. SHAMANNA.—I beg to move the following amendment:

"That in clause 2, add a new section 29B:

"29B(1). While utilizing borrowed funds for the projects undertaken by the Board out of the borrowed funds, in the estimate to be prepared the quantum of interest payable to the loan borrowed in respect of that project should be added.

(2) The amount of the borrowed loan should be utilized for productive and development projects only.".

Mr. SPEAKER.—Amendment moved:

"That in clause 2, add a new section 29B:—

"29B(1). While utilizing borrowed funds for the projects undertaken by the Board out of the borrowed funds, in the estimate to be prepared the quantum of interest payable to the loan borrowed in respect of that project should be added.

(2) The amount of the borrowed loan should be utilized for productive and development projects only."

† ಶ್ರೀ ಟಿ. ಆರ್. ಶಾಮಣ್ಣ.—ಅಧ್ಯಕ್ಷರೇ, ಕ್ಲಾಸ್ 2 ರಲ್ಲಿ ಈ ರೀತಿ ಸೂಚಿಸಿದ್ದೀರಿ.

"The rules made by the Government for the purpose of this section may empower the Board to borrow by the issue of debentures and make arrangements with bankers."

ಈಗ ಮಾನ್ಯ ಕೃಷ್ಣನ್‌ರವರು ಮಾರ್ವಾಡಿಗಳ ಹತ್ತಿರ ಮತ್ತು ಕಾರ್ಪೊರೇಷನ್‌ಇಂದ ಸಾಲ ತೆಗೆದು ಕೊಳ್ಳಬಹುದು ಎನ್ನುವ ಸಲಹೆ ಕೊಟ್ಟರು. ಆದರೆ ಫೈನಾನ್ಸ್ ಕಾರ್ಪೊರೇಷನ್ನಿನವರು ಮಾರ್ವಾಡಿಗಳಂತೆ 13 ರಿಂದ 18 ಪರ್ಸೆಂಟಿಗಿಂತ ಕಡೆಮೆ ಬಡ್ಡಿಗೆ ಕೊಡುವುದಿಲ್ಲ. ಅರೀತಿ 18 ಪರ್ಸೆಂಟ್‌ನಂತೆ ಸಾಲ ತೆಗೆದುಕೊಂಡು ಮಾರ್ವಾಡಿ ಬಡ್ಡಿಯಂತೆ ಬಡ್ಡಿ ಕೊಟ್ಟರೆ ಯಾವ ಪ್ರಾಜೆಕ್ಟ್ ಕೂಡ ನಡೆಸುವುದಕ್ಕಾಗುವುದಿಲ್ಲ.

Sri K. PUTTASWAMY (Minister for Law, Labour and Parliamentary Affairs).—I want to tell the House how loans are permitted to be raised. Without the permission of the Re erve Bank we cannot permit any of our intitutions to go to the open market for raising loan. The House knows very well that the Reserve Bank always takes care to see to the conditions which can be agreed to by an institution of the kind of Government. They have never permitted us to offer any interest higher than 6%. Therefore the hon. Member need not have any apprehensions about those things.

Sri C. K. RAJAIAH SHETTY.—But you have gone against the directions of the Reserve Bank many times.

ಶ್ರೀ ಕೆ. ಪುಟ್ಟಸ್ವಾಮಿ.—ಸಾಲ ತೆಗೆದುಕೊಳ್ಳಬೇಕಾದರೆ ರಿಸರ್ವ್ ಬ್ಯಾಂಕ್‌ನವರು ಇಷ್ಟೇ ಬಡ್ಡಿ ಕೊಡಬೇಕು ಎಂದು ಹೇಳುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.—ಎರಡನೆಯದಾಗಿ ಮಾನ್ಯ ಮಂತ್ರಿಗಳು ಸ್ಟೇಟುಗಳು ಮಾಡತ ಎಂದು ಹೇಳುತ್ತಾರೆ. ಆದರೆ ಟ್ರಸ್ಟ್ ಬೋರ್ಡ್‌ನವರೇ ಈ ಭೂಮಿ ಬೆರೆ ಏರುವುದಕ್ಕೆ ಮುಖ್ಯ ಕಾರಣರು ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಬೆಂಗಳೂರಿನ ಸುತ್ತಮುತ್ತಲೂ

(ಶ್ರೀ ಟಿ. ಆರ್. ಶಾಮಣ್ಣ)

ಇರತಕ್ಕಂಥ ಜಾಗವನ್ನು ಮೊದಲೇ ಟ್ರಸ್ಟ್‌ಬೋರ್ಡ್ ಪ್ರೋಗ್ರಾಂ ಪ್ರಕಾರ ಬರ್ಕ್ ಆಕ್ಷನ್ ಮಾಡಿ ಯಾರಿಗೂ ಕೊಡುವುದಕ್ಕೆ ಅವಕಾಶ ಕೊಡದಿದ್ದರೆ ಸೈಟುಗಳ ಬೆಲೆ ಏರುತ್ತಾ ಇರಲಿಲ್ಲ. ಮೊದಲು ಈ ಮಧ್ಯಸ್ಥಿಕೆಗಾರರು ಏನು ಮಾಡಿದರು ಎಂದರೆ ಬಹಳ ಹೊಲಗಳನ್ನು ತೆಗೆದುಕೊಂಡು 4 ಕಲ್ಲುಗಳನ್ನು ನೆಟ್ಟುಬಿಟ್ಟು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿದರು. ಹೀಗೆ ಮಾಡಿದ್ದರಿಂದ ಭೂಮಿ ಬೆಲೆ ಕೆಚ್ಚುವುದಕ್ಕೆ ಅವಕಾಶವಾಯಿತು.

ಮೊದಲೇ ಇವರು ಸರಿಯಾದ ಕ್ರಮ ತೆಗೆದುಕೊಂಡಿದ್ದರೆ ಇಂತಹ ಪರಿಸ್ಥಿತಿಗೆ ಒಳಗಾಗುತ್ತಿರಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ. —ಮಾನ್ಯ ಸದಸ್ಯರು ಇದನ್ನು ಮೊದಲೇ ಹೇಳಲಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಮೊದಲು ತಾವು ಇದ್ದಿರಿ. ನಾನು ಇದ್ದಿರಲಿಲ್ಲ. ಆದುದರಿಂದ ಆರೀತಿ ಮಾಡಿದ್ದರೆ ಚೆನ್ನಾಗಿತ್ತು ಎಂದು ಹೇಳಿದೆ. ಈಗ ಸ್ವಲ್ಪಮಟ್ಟಿಗೆ ಸ್ಟನ್ಗ್ ಆಗಿ ಕ್ರಮ ತೆಗೆದುಕೊಂಡ ಮೇಲೆ ರೇಟಿನ್ಯೂ ಸೈಟುಗಳ ಬೆಲೆ ಕಡಿಮೆಯಾಗಿದೆ. ಮೊದಲೇನೇ ಇದನ್ನು ಸಮಗ್ರವಾಗಿ ಮಾಡಬೇಕಾಗಿತ್ತು.

ಇನ್ನು ವಾಟರ್‌ಬೋರ್ಡ್ ಥೇರ್ಮನ್ ವಿಷಯ ಹೇಳುತ್ತೇನೆ. ಅವರನ್ನು ಕೇಳಿದರೆ ಟ್ರಸ್ಟ್‌ಬೋರ್ಡ್‌ನವರು ತಮ್ಮ ಕೆಲಸಗಳನ್ನು ಪೂರೈಸಿಕೊಟ್ಟರೆ ನಾವು ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಈಗ ಹೊಸದಾಗಿ ಟ್ರಸ್ಟ್ ಬೋರ್ಡಿನವರು ಸಾಲ ಮಾಡುತ್ತೇವೆ ಎಂದು ಹೇಳುತ್ತಾರೆ. ಆದುದರಿಂದ ನಾನು ಹೇಳುವುದು ಈಗ ಹೊಸದಾಗಿ ಮಾಡತಕ್ಕಂಥ ಸಾಲವನ್ನು ಈಗ ಇರತಕ್ಕಂಥ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಉಪಯೋಗಿಸಬೇಡಿ. ಸದಾಶಿವನಗರ, ಶಾಂತಿನಗರ ಇನ್ನು ಇತರ ಕಡೆಗಳಲ್ಲಿ ಮತ್ತು ಹೌಸಿಂಗ್ ಬೋರ್ಡ್ ಲೇ ಔಟ್ಸ್ ಇರತಕ್ಕಂಥ ಕಡೆಗಳಲ್ಲಿ ಈ ನೆರವನ್ನು ಉಪಯೋಗಿಸಬೇಡಿ. ಏಕಕ್ಕೆಂದರೆ ಹೊಸ ಲೇ ಔಟ್ಸ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಈಗ ಸಾಲ ತೆಗೆದುಕೊಂಡ ದುಡ್ಡನ್ನು ಯಾವರೀತಿ ಖರ್ಚು ಮಾಡಬೇಕೆಂಬ ಬಗ್ಗೆ ಸಾಕಾದಷ್ಟು ಸಲಹೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಸಾಲ ಮಾಡತಕ್ಕಂತ ಹಣ ಯಾವ ಉದ್ದೇಶಕ್ಕಾಗಿ ತೆಗೆದುಕೊಳ್ಳುತ್ತಾರೋ ಅಂಥಾದ್ದಕ್ಕೇ ಉಪಯೋಗಿಸಬೇಕು. ಈ ದುಡ್ಡನ್ನು ಅಕ್ರಮವಾಗಿ ಖರ್ಚು ಮಾಡದೆ ಪ್ರಾಜೆಕ್ಟ್ ಮತ್ತು ಡೆವಲಪ್‌ಮೆಂಟ್ ಕೆಲಸಗಳಿಗೆ ಮಾತ್ರ ಉಪಯೋಗಿಸಿ ನಾನು ಏನು ಎರಡು ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೇನೋ ಅದಕ್ಕೆ ಯಾವ ವಿಧವಾದಂಥ ವಿರೋಧ ಇಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, Mysore Ordinance No. 5 of 1969 ಪ್ರಕಾರ ಏನು ಒಂದು ಆರ್ಡಿನೆನ್ಸ್‌ನ್ನು ಸರ್ಕಾರದವರು ಹೊರಡಿಸಿದ್ದಾರೋ ಅದು ಈಗ ಸಭೆಯ ಮುಂದೆ ಒಪ್ಪಿಗೆ ಪಡೆಯುವುದಕ್ಕಾಗಿ ಬಂದಿದೆ. ಕೆಲವು ಸಂದರ್ಭದಲ್ಲಿ ಈ ಆರ್ಡಿನೆನ್ಸ್‌ನ್ನು ಪೂರ್ವಭಾವಿಯಾಗಿ ಮಾಡುವ ಸಂದರ್ಭ ಬರುತ್ತದೆ. ಆದುದರಿಂದ ಮಾನ್ಯ ಸದಸ್ಯರು ಹೇಳಿದಂಥ ವಾದವನ್ನು ನಾನು ಒಪ್ಪಿಕೊಳ್ಳಲು ಅಸಮರ್ಥನಾಗಿದ್ದೇನೆ.

ಇನ್ನು ಈ ಸಾಲ 50 ಕೋಟಿ ರೂಪಾಯಿಗಿಂತ ಹೆಚ್ಚು ಇರಬಾರದು ಎನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡಿದ್ದಾರೆ. ಸರ್ಕಾರ ಯಾವುದಾದರೂ ಒಂದು ಸಂಸ್ಥೆಯಿಂದ ಸಾಲವನ್ನು ಎತ್ತಬೇಕಾದರೆ, ಡಿಬೆಂಚರ್ ರೇಟ್ ಮಾಡಬೇಕಾದರೆ ರಿಸರ್ವ್ ಬ್ಯಾಂಕ್ ಅನುಮತಿ ಪಡೆಯಬೇಕು. ಅವರು 50 ಕೋಟಿ 100 ಕೋಟಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಅವರು ಒಪ್ಪಿಕೊಳ್ಳುವುದಿಲ್ಲ. ಅವರು ಯಾವ ಕೆಲಸಕ್ಕಾಗಿ ತೆಗೆದುಕೊಳ್ಳುತ್ತಾರೆ, ಏನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ತೆಗೆದುಕೊಳ್ಳುತ್ತಾರೆ, ಸಾಲ ತೀರಿಸಲು ಇವರ ಏರ್ಪಾಡುಗಳೇನು, ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ರಿಸರ್ವ್ ಬ್ಯಾಂಕ್‌ನವರು ಒಪ್ಪಿಗೆ ಕೊಡುತ್ತಾರೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಷ್ಟು ಬಜೆಟಾವಣೆ ಅವಶ್ಯ ಇದೆ ಎಂದು ನಾನು ತಿಳಿದಿಲ್ಲ.

10-00 A.M.

ಇದೇ ರೀತಿ ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರೂ ಒಂದೆರಡು ತಿದ್ದುಪಡಿಗಳನ್ನು ತಂದು ಕೆಲವು ಸೂಚನೆಗಳನ್ನು ಕೊಟ್ಟರು. ಹಣವನ್ನು ಸಾಲವಾಗಿ ತೆಗೆದು

ಕೊಳ್ಳವಾಗ ಇದರ ಮೇಲೆ ಬಡ್ಡಿ ಕೂಡ ಬರುತ್ತದೆ. ಇದನ್ನು ಯಾರ ಮೇಲೆ ಹಾಕಬೇಕು ಮತ್ತು ಯಾವ ಬಾಬಿಗಾಗಿ ಸಾಲ ಎಂದು ತೆಗೆದುಕೊಳ್ಳುತ್ತೀವೋ ಅದೇ ಬಾಬಿಗೇ ಆ ಹಣ ಉಪಯೋಗ ಮಾಡಬೇಕು ಎಂದು ಹೇಳಿದರು. ಇದರ ಬಗ್ಗೆ ಟ್ರಸ್ಟ್ ಬೋರ್ಡಿನಲ್ಲಿರುವ ಅಕ್ಕನಲ್ಲೇ ಯಾವ ರೀತಿ ನಿರ್ಧಾರ ಮಾಡುತ್ತಾರೆ ಎಂದು ಇದೆ ಮತ್ತು ಅವರು ಹೇಳಿದ ಸೂಚನೆಗಳೆಲ್ಲಾ ಈಗಾಗಲೇ ಕಾರ್ಯಗತವಾಗುತ್ತಿದೆ ಎಂದು ಅವರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಇದೇ ರೀತಿ ಸಾಲ ವಾಗಿ ವಸೂಲು ಮಾಡುವ ಹಣವನ್ನು ಪ್ರೊಡಕ್ಟೀವ್ ಅಂಡ್ ಡೆವಲಪ್‌ಮೆಂಟ್ ಪರ್ಪಸಸ್‌ಗಾಗಿಯೇ ಉಪಯೋಗ ಮಾಡಬೇಕೆಂದು ಒಂದು ಸೂಚನೆ ಕೊಟ್ಟರು. ಸಾಲ ಯಾವ ರೀತಿ ತೆಗೆದುಕೊಳ್ಳಬೇಕು ಮತ್ತು ಅದನ್ನು ಹೇಗೆ ಉಪಯೋಗ ಮಾಡಬೇಕು ಎನ್ನುವುದು ಈಗಿರುವ ಟ್ರಸ್ಟು ಬೋರ್ಡ್ ಆಕ್ಟಿನಲ್ಲೇ ಇದೆ. ಯಾವ ಉದ್ದೇಶಕ್ಕಾಗಿ ಸಾಲವನ್ನು ಬೋರ್ಡ್ ತೆಗೆದುಕೊಳ್ಳುತ್ತದೋ ಅದೇ ಉದ್ದೇಶಕ್ಕೇ ಅದನ್ನು ವೆಚ್ಚ ಮಾಡಬೇಕೆಂದು ಇದರಲ್ಲಿ ನಿರ್ದಿಷ್ಟವಾಗಿ ಇದೆ. ಈ ಉದ್ದೇಶವಿಟ್ಟು ಬೇರೆ ಯಾವ ಉದ್ದೇಶಕ್ಕೂ ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಅದುದರಿಂದ ಇಲ್ಲಿ ತಂದಿರುವ ತಿದ್ದುಪಡಿ ಅಷ್ಟು ಸಮರ್ಥನೀಯವಾಗಿಲ್ಲ ಮತ್ತು ಇದನ್ನು ಒಪ್ಪಿಕೊಳ್ಳುವುದಕ್ಕೂ ಆಗುವುದಿಲ್ಲ.

Mr. SPEAKER.—I put the amendments to Clause 2. The question is :

"That at page 2 in the sub-Section (1) of the proposed section 29A, line 3, for the word 'Government' the word 'Legislature' shall be substituted.

"That at page 2, the following proviso shall be added to sub-section (1) of the proposed Section 29A; 'provided the Board shall not borrow any sum exceeding Fifty crores in aggregate".

The amendments were negatived.

Mr. SPEAKER.—The question is :

That in clause 2, add a new section 29B.

"29B(1). While utilising the borrowed funds for the projects undertaken by the Board, out of the borrowed funds, in the estimate to be prepared the quantum of interest payable to the loan borrowed in respect of that project, should be added."

"(2) The amount of the borrowed loan should be utilised for productive and development projects only."

The amendments were negatived.

Mr. SPEAKER.—The question is :

"That clause 2 do stand part of the Bill."

The motion was adopted.

Clause 2 was added to the Bill.

CLAUSE 3.

Mr. SPEAKER.—There are no amendments to the clause 3 to 5. I will put them to vote of the House. The question is:

"That clauses 3 to 5 both inclusive do stand part of the Bill."

The motion was adopted.

Clauses 3 to 5 both inclusive were added to the Bill.

CLAUSE 1, etc.

Mr. SPEAKER.—The question is:

That Clause 1 the long Title and the Enacting formula do stand part of the Bill."

The motion was adopted.

Clause 1, the long Title and the Enacting Formula were added to the Bill.

Motion to pass

Sri B. M. PATIL.—I beg to move:

"That the City of Bangalore Improvement (Amendment) Bill, 1970, be passed."

Mr. SPEAKER.—The Question is:

"That the City of Bangalore Improvement (Amendment) Bill, 1970, be passed."

The motion was adopted.

MYSORE LAND REVENUE (AMENDMENT) BILL, 1970.

(i) Statutory Resolution to disapprove the Resolution of 1969

(ii) Motion to consider the Bill.

Sri M. NAGAPPA.—I beg to move:

"That this Assembly disapproves the Ordinance No. 8 of 1969 namely 'The Mysore Land Revenue (Second Amendment) Ordinance, 1969', promulgated on 23rd day of October 1969 by the Governor of Mysore."